ಅಪರಂಜಿ

ಡಿಸೆಂಬರ್ 9

ತಿಳಿನಗೆಯ ಕಾರಂ



ಪ್ರಕಾಶ್
ಆರ್. ಶಂಕರ್
ಕಂ. ಭಂ. ಕೃಷ್ಣಮೂರ್ತಿ
ಶಿವು
ರಾಶಿ
ನಾಗುಶ್ರೀ ಸೂರಿ
ಶಿಲಾಬಾಲಿಕೆ
ಬಿ.ಆರ್. ನಾಗೇಶ್
ಕು. ಗೋ.
ಆನಂದ
ಇಸ್ಮಾಯಲ್
ಬಿ.ಎಸ್. ಪ್ರಭಾಕರ್

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷಣ್ ಬರೆದ ವ್ಯಂಗ ಚಿತ್ರ

ಶುಭಾಶಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಆಜೀವ ಚಂದಾ : ರೂ. 500

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 ಡಿಸೆಂಬರ್ 98 ಸಂಚಿಕೆ-3

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 16 ಡಿಸೆಂಬರ್ 98 ಸಂಚಿಕೆ-3

ಅಸಂಗೋಹ್ಯಯಂ ಪುರುಷಃ

- ಬೃಹದಾರಣ್ಯಕ

ಈ ಪುರುಷನು ಸಂಗವಿಲ್ಲದವನು. ಸೂರ್ಯಬಿಂಬವು ಜಗತ್ತಿನ ಹಲವು ಜಲಾಶಯಗಳಲ್ಲಿ ಪ್ರತಿಬಿಂಬಿತವಾಗುತ್ತದೆ. ಕೊಳಚೆಯಾಗಲೀ, ಸುರಗಂಗೆಯಾಗಲೀ ಅದರಿಂದ ಸೂರ್ಯನು ಕಲುಷಿತನೂ ಆಗುವುದಿಲ್ಲ; ಪವಿತ್ರನೂ ಆಗುವುದಿಲ್ಲ. ಹಾಗೆಯೇ ಬ್ರಹ್ಮಕ್ಕೆ ಮಾಯಾ ಪ್ರಪಂಚದ ಸಂಗವಿಲ್ಲ ಎನ್ನುತ್ತದೆ ಉಪನಿಷತ್ತು.

ಈ ಪುರುಷನೂ ಅಷ್ಟೇ. ರಾಜ್ಯ ಅರಾಜಕವಾಗಿದೆ. ಭ್ರಷ್ಟಾಚಾರದಲ್ಲೇ ತೊಡಗಿದ್ದಾರೆ - ಶಿಷ್ಟರೆನ್ನುವರು ಬಾಯಿಬಾಟಲಿ; ಮೈ ಯಾರ ತೆಕ್ಕೆಯಲ್ಲೋ, ಅವನಿಗೆ ಇದಾವುದರ ಲೇಪವಿಲ್ಲ, ಜನತೆಗೆ ಒಳಿತನ್ನು ಹೀಗೇ ಮಾಡಬೇಕು; ಮಾಡುತ್ತಿದ್ದೇನೆ ಎನ್ನುತ್ತಾನೆ.

ಈ (ಕಾ?) ಪುರುಷರನ್ನು ನೋಡಿ, ಭಾರತ ಪ್ಲೂರಲಿಸ್ಟಿಕ್ ಅಂತೆ. ಸರಸ್ವತಿಗೆ ವಂದಿಸಿದರೆ ಅದು ಸೆಕ್ಯುಲರಿಸಂಗೆ ದ್ರೋಹವಂತೆ. ಭಾರತ ಸಂಸ್ಕೃತಿಯ ಯಾವ ಅಂಶವೂ ಇರಬಾರದಂತೆ. ಅನ್ಯಧರ್ಮಗಳ ಸಂತೆಯೇ ಭಾರತೀಯವಂತೆ. ಅವರಿಗೂ ಸ್ವಾಭಿಮಾನದ, ಭಾರತೀಯತೆಯ ಸಂಗವಿಲ್ಲ!

ಇವನನ್ನು ನೋಡಿ, ಬುದ್ಧನ ನಾಡಿನಲ್ಲಿ ಹುಟ್ಟಿದವನು. ಮಾಫಿಯಾ ಕೂಟದಲ್ಲಿ ಮೆರೆಯುವವನು. ತಾನು ಮೆರೆಯಬೇಕು. ಅಹಿಂಸೆ? ಅದರ ಸಂಗ ಇವನಿಗಿಲ್ಲ. ಶಾಂತಿ? ಅದರ ಸಂಗ ಬೇಕಿಲ್ಲ.

ಈ ಎಲ್ಲದರ ನಡುವೆ ಉಪನಿಷದ್ವಾಕ್ಯದ ಸಂಪಾದಕೀಯವನ್ನು, ತಾನು ಪ್ರಕಟಿಸುತ್ತಿರುವೆನಲ್ಲಾ ಎಂದು ಅಪರಂಜಿ ಬಿಕ್ಕಿ ಬಿಕ್ಕಿ ನಕ್ಕಳು.



○ ಪ್ರಕಾಶ್

ಬೆಂಗಳೂರು ಬಳಿ ಬರಲಿದೆ, ವಿಶ್ವದ ಅತಿ ಎತ್ತರದ ಕಟ್ಟಡ

- ಸುದ್ದಿ

ಹೊಟ್ಟೆಗೆ ಹಿಟ್ಟಿಲ್ಲ.......!!

ಅಮೆರಿಕದ ಧನಿಕನೊಬ್ಬ, ಬೆಂಗಳೂರಿನಲ್ಲಿ ಸಿಕ್ಕಿದ ಎರಡು ರೂಪಾಯಿ ನೋಟನ್ನ ಮ್ಯೂಸಿಯಂನಲ್ಲಿಡಲು, ಹತ್ತು ರೂಪಾಯಿಗೆ ಕೊಂಡನಂತೆ!!

★★★

ಅಪಘಾತ ರಹಿತ ಚಾಲನೆ; 209 ಚಾಲಕರಿಗೆ ಪ್ರಶಸ್ತಿ

- ಪತ್ರಿಕೆ

ಇಂಥವರು ಹೆಚ್ಚಲಿ, ನನ್ನ ಕೆಲಸ ಕಮ್ಮಿಯಾಗುತ್ತೆ, ಅಂತ ಚಿತ್ರಗುಪ್ತ ನಸುನಕ್ಕನಂತೆ!!

ಬೆಲೆ ಏರಿಕೆಗೆ ಕೇಂದ್ರ ಕಾರಣ; ದೇವೇಗೌಡರು.

ಈಗ ಅವರು ಹೀಗೆ ಹೇಳಬಹುದು!!

ದೇಶದ ಅಭದ್ರತೆಗೆ ಆಸ್ಪದ ಇಲ್ಲ

- ಅದ್ವಾನಿ ಹೇಳಿಕೆ

ಅಂದರೆ ದೇಶದ ಒಳಗಿನಿಂದ ಅಂತಲೋ??

ಹಳಿ ತಪ್ಪುವ ಹಾದಿಯಲ್ಲಿ ಜನತಾದಳ
- ಪತ್ರಿಕೆ

ಅರೆ, ಅದು ಹಳಿಯ ಮೇಲೆ ಇದ್ದಿದ್ದೇ ಗೊತ್ತಾಗಲಿಲ್ಲವಲ್ಲ!!

ನಗರ ಕಾರ್ಪೊರೇಷನ್ ಕಾರ್ಯ ನಿರ್ವಹಣೆ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ ಸರ್ಕಾರದಿಂದ ಪತ್ರ
- 25 ವರ್ಷದ ಹಿಂದಿನ ಸುದ್ದಿ

ಶಾಶ್ವತ ಸ್ಥಿತಿ ಅಂದರೆ ಇದೇ!

★★★

ಬೇಳೆ ಕಾಳುಗಳ ಆಮದು ಸುಂಕ ರದ್ದು
- ಪತ್ರಿಕೆ


ಈಗಲಾದರೂ ಬೇಗ ಬೇಯುತ್ತೇನೋ??

★★★

ಹಾಕಿ ಪಂದ್ಯದಲ್ಲಿ ಪೋಸ್ಟಲ್ ತಂಡಕ್ಕೆ ಜಯ
- ಕ್ರೀಡಾ ಸುದ್ದಿ

ಕೈ ಹಾಕಿ, ಹಾಕಿ ಅಭ್ಯಾಸ!!

★★★



ಸೋನಿಯಾ ಪ್ರಧಾನಿ ಆದ್ರೆ ಪಿಜ್ಜಾನ ರಾಷ್ಟ್ರೀಯ ತಿನಿಸು ಅಂತ ಮಾಡ್ತಾರಂತೆ, ನಿಜವೇನ್ರೀ

ಮೈಸೂರಜ್ಜಿ ಅಮೇರಿಕಾದಲ್ಲಿ

– ಆರ್. ಶಂಕರ್

ಮೈಸೂರಜ್ಜಿ ಅಂದರೆ ನನ್ನ ಹೆಣ್ಣು ಕೊಟ್ಟ ಅತ್ತೆ. ನನ್ನ ಮತ್ತು ನನ್ನ ಬೊಂಬಾಯಿ ಷಡ್ಡಕರ ಮಕ್ಕಳು ಇಟ್ಟ ಹೆಸರು. ಅವರದು ಬಹಳ ದಾಷ್ಟಿಕ, ದೊಡ್ಡ ಬಾಯಿ, ತುಂಬಿದ ಕೈ, ನಿಲ್ಲದ ಮಾತು ಮೃದು ಹೃದಯ. ಎಲ್ಲರಿಗೂ ಬೇಕು ಈ ಅಜ್ಜಿ - ತುಂಬಾ ಜನಪ್ರಿಯರು. ತಮಿಳುನಾಡಿನಿಂದ ಬಂದು 16 ವರ್ಷಕ್ಕೆ ಕನ್ನಡ ಓದು ಬರಹ ಕಲಿತು, ಡಾಕ್ಟರ ಹೆಂಡತಿಯಾಗಿ, ಡಾಕ್ಟರಮ್ಮ ಅಂತ ಪ್ರಸಿದ್ಧಿ. ಅವರ ಮನೆ ಸುತ್ತಾ ಮುತ್ತಾ ಹಿಂದಿ, ತೆಲುಗು, ಉರ್ದು ಚೂರುಪಾರು ಕಲಿತು ಎಲ್ಲಾರ ಜೊತೆಗೂ ಸ್ನೇಹ ಮಾಡಿದ್ದರು.

ದೊಡ್ಡ ಮಗ ಬಾಬು 1957 ರಲ್ಲಿ ದೇಶ ಬಿಟ್ಟುಹೋಗಿ, ಕಡೆಗೆ ಅಮೇರಿಕಾವಾಸಿ ಆಗಿಬಿಟ್ಟ, ಬನ್ನಿ ಬನ್ನಿ ಅಂತ ಕರೀತಿದ್ದ. ನನಗ್ಯಾಕೆ ಅದೆಲ್ಲಾ? ನನ್ನಿಂದ ವೃಥಾ ಖರ್ಚು ನಿನಗೆ ಅಂತಿದ್ರು. ಇಂದ್ನಲ, ಬಾಬು ಮತ್ತು ಸೊಸೆ ದುಂಬಾಲು ಬಿದ್ದಾಗ, ಹ್ಞೂ ಬರ್ತೀನಪ್ಪ ಅಂದ್ಬಿಟ್ರು.

ಮಕ್ಕಳೆಲ್ಲಾ ಕುಚೋದ್ಯಕ್ಕೆ ಮುಸ್ತಾಫಾ ದರ್ಜಿನ ಮನೇಗೆ ಕರಕೊಂಡು ಬಂದು "ನೀವು ಅಮೇರಿಕಾಗೆ ಹೋಗಬೇಕಾದರೆ ಫ್ರಾಕು ಹಾಕ್ಕೋಬೇಕು ಅದಕ್ಕೆ ಅಳತೆ ತೆಗೋಳೋಕೆ ಮುಸ್ತಾಫಾ ದರ್ಜಿ ಬಂದಿದಾನೆ" ಅಂದ್ರು. ಅಜ್ಜಿ ಖಡಾಖಂಡಿತವಾಗಿ ಹೇಳಿಬಿಟ್ರು. "ಫ್ರಾಕುಗೀಕು ನಾನು ಹಾಕ್ಕೊಳೋಲ್ಲ - ಅಮೆರಿಕಾಗೆ ನಾನು ಹೊಗೋದೇ ಇಲ್ಲ. ಹೋದರೆ ನನ್ನ 9 ಗಜದ ಸೀರೆ, ಬೇಡವಾದರೆ ಬೇಡಿ" ಅಂದ್ಬಿಟ್ರು. "ಇಲ್ಲಮ್ಮಾ ತಮಾಷೆಗೆ" ಅಂತ ಹೇಳಿದ ಮೇಲೆ Relent ಮಾಡಿದ್ರು.

first step, ಪ್ಯಾಸ್‌ಪೋರ್ಟ್‌ಗೆ ಅರ್ಜಿ ಹಾಕಬೇಕು. ಹಾಕಿಸಿದರು. ಒಂದಿನ, ಒಬ್ಬ ದೊಡ್ಡ ಮೀಸೆ ಪೋಲಿಸ್ ದಫೇದಾರ ಬಂದು ಬೆಲ್ ಮಾಡಿದ ಅಜ್ಜಿಗೆ ಜಂಘಾಬಲ ಉಡುಗೋಯ್ತು. ಯಾರು ಏನು ಮಾಡಿದ್ರೋ ಏನೋ ಅಂತ. ಬಾಗಲು ತೆಗೆದು ನೋಡಿದ್ರೆ - ದಫೇದಾರ್ ಕೆಂಪಯ್ಯ - ಹಳೇ ಮನೆಹತ್ರ ಇದ್ದವನು. "ಅಯ್ಯೋ ನೀವೇನಾ ಲಕ್ಸಮ್ಮಾವರು. ನಿಮ್ಮ ಎಸರೇ ಗೊತ್ತಿಲ್ಲನೋಡಿ ನಾವೆಲ್ಲಾ ಡಾಕ್ಟ್ರಮ್ಮ ಡಾಕ್ಟ್ರಮ್ಮಾ ಅಂತ ಕರೀತಿದ್ದು. ತನಿಖೆ ಮಾಡೊಕೆ ಬಂದಿದ್ದೀನಿ pass port ಬಗ್ಗೆ" ಅಂದ. ಅಜ್ಜಿ ಅವನ ಹೆಂಡತಿ ಮಕ್ಕಳ ಬಗ್ಗೆ ವಿಚಾರಿಸಿ, ಉಪ್ಪಿಟ್ಟು ಕಾಫಿ ಕೊಟ್ಟು ರವಾನೆ ಮಾಡಿದ್ರು, ಹೋಗ್ತಾ, ಹೋಗ್ತಾ ಕೆಂಪಯ್ಯ ಹೇಳಿದ - ನಿಮಗೆ ಒಂದಲ್ಲ ಎರಡು pass port ಕೊಡಿ ಅಂತ ಬರೀತೀನಿ ಅಂತ.

ಇನ್ನು ಮುಂದಿಂದು Visa. ಅಜ್ಜಿ ಹೊರಟರು ಮದ್ರಾಸ್‌ಗೆ. ಹೋಗಿ ಅಮೆರಿಕನ್ Consulate ಮುಂದೆ ಕ್ಯೂ ನಿಲ್ಲಬೇಕಾಯಿತು. ಪುಟ್ಟ ಚಾಪೆ ಹಾಸಿಬಿಟ್ಟು, ನನ್ನ ಕೈಯಲ್ಲಿ ನಿಲ್ಲೋಕಾಗೊಲ್ಲ ಮುದಕಿಯಾದೆ ಅಂತ ಜಪ ಮಾಡೋಕೆ ಪ್ರಾರಂಭ ಮಾಡಿದ್ರು. ಯಾವನೋ ಕೆಂಪುಮೂತಿ ಬಂದು ನೋಡಿದನಂತೆ. Security ಪ್ಯಾದೆನ ಕಳುಹಿಸಿ, first ಅಜ್ಜೀನೇ ಕರೆಸಿದನಂತೆ. ಅಜ್ಜೀಗೋ ಗಾಭರಿ, ಈ ಸಾಹೇಬ ಏನು ಕೇಳ್ತಾನೋ ಅಂತ.

ಆ ಕೆಂಪು ಮೂತಿ, ಅಜ್ಜೀನ ತಮಿಳಿನಲ್ಲೇ ಮತಾಡಿಸಿದನಂತೆ ಅಜ್ಜೀಗೆ ಆಶ್ಚರ್ಯ - ಎಲಾ ಇವನ ಅಂತ ಮೂಗಿನ ಮೇಲೆ ಬೆರಳಿಟ್ರಂತೆ. ''ನೋಡಪ್ಪಾ ನನ್ನ ಮಗ ಕರೀತಿದಾನೆ. ಲಕ್ಷಾಂತರ ರೂಪಾಯಿ ನನ್ನಿಂದ ಖರ್ಚು. ಆದ್ದರಿಂದ ದಯವಿಟ್ಟು Visa ಕೊಡಬೇಡಾ. ನನ್ನ ಪಾಡಿಗೆ ನಾನು ಮೈಸೂರಿಗೆ ಹೋಗಿ, ರಾಮಾಕೃಷ್ಣಾ ಅಂತ ಬದುಕೋತೀನಿ'' ಹೀಗೆ ಸುಮಾರು ಮಾತುಕತೆ ಆಯಿತು. ಹೊರಗಡೆ ಮಗನಿಗೆ ಗಾಭರಿ, ಏನಾದರೂ kidnap ಆಗಿಹೋದರೋ ಅಮ್ಮ ಅಂತ. ಅಷ್ಟು ಹೊತ್ತಿಗೆ - ಅಜ್ಜಿ ಬಂದರು ಹೊರಗೆ ಹಲ್ಲು ಬಿಡುತ್ತಾ - ಆಕೆಂಪು ಮೂತೀನೆ ಕರಕೊಂಡು ಬಂದು ಬಿಟ್ಟು ಹೋದನಂತೆ. ನೋಡಿದರೆ multiple entry visa 5 ವರ್ಷದ್ದು ಕೊಟ್ಟಿದಾನೆ. ಎಲ್ಲಾರೂ ವಾರೆ ಮುದುಕಿ ಅಂದ್ರಂತೆ.

ಇನ್ನು ಗತ್ಯಂತರವೇ ಇಲ್ಲ - ಅಮೇರಿಕಾಗೆ ಹೋಗಲೇಬೇಕಾಯಿತು. ಅಲ್ಲಿ ಕಾರ್‌ಗಳು, TV ಗಳು, cell phone ಗಳು (''ನೋಡೇ, wire ಏ ಇಲ್ಲದ telephone ಗಳ ಬಾಬು ಮನೇಲಿ'') modern appliances and gadjets ನೋಡಿದ್ರಂತೆ. ಆದ್ರೆ ಒಂದೂ ಮುಟ್ಟೋಕೆ ಭಯವಾಯ್ತಂತೆ. ಸೊಸೆ ಪಕ್ಕದಲ್ಲಿ ನಿಂತು, ತೋರಿಸಿದ ಮೇಲೇ stove ಮುಟ್ಟಿದ್ದು.

ಬಾಬು ಅಮ್ಮಂಗೆ welcome party ಇಟ್ಕೊಂಡಿದ್ನಂತೆ American ಫ್ರೆಂಡ್ಸೂ, Indian friends ಗಳು ಸುಮಾರು 40-50 ಜನ ಬಂದಿದ್ರಂತೆ. ಒಬ್ಬ ಕೆಂಪು ಮೂತಿ ಧಾಂಡಿಗ 8-9 ಅಡಿ ಇದ್ನಂತೆ. ನೇರಾಗಿ ಬಂದು ಅಜ್ಜೀನ ಅನಾಮತ್ತಾಗೆ ತ್ತಿ ಹಿಡಿದು "Hai mom" ಅಂತ ಹೇಳಿ ಲೊಚ ಲೊಚ ಅಂತ ಮುತ್ತು ಕೊಟ್ನಂತೆ. ನನ್ಮಕ್ಕಳು ನಕ್ಕಿದ್ದೇ ನಕ್ಕಿದ್ದು ಇದನ್ನ ಕೇಳಿ, ''ನೋಡೇ, 1961 ರಲ್ಲಿ ನಿಮ್ಮಜ್ಜ ಹೋಗ್ಬಿಟ್ಮೇಲೆ ನನಗೆ ಯಾರೂ ಮುತ್ತು ಕೊಟ್ಟಿರಲಿಲ್ಲ. ಈ ಘಾತುಕ ಕೊಟ್ಬಿಟ್ಟ'' ಅಂದರು. ಅಜ್ಜೀಗೆ ಬಹಳನೇ ನಾಚಕೆ ಆಗಿ, ''ಇಳಿಸೋ ಪಾಪಿ'' ಅಂತ ಅರಚಿದ್ರಂತೆ. ನಗ್‌ನಗ್ತಾ ಇಳಿಸಿದನಂತೆ. ''ಛೀ ಹುಚ್ಮುಂಡೇದೇ'' ಅಂತ ಅವನ ಪೃಷ್ಟದ ಮೇಲೆ ಒಂದು ಕೊಟ್ರಂತೆ. ''ಕೆಂಪ್ಗಾಗಿ ಬಟ್ಟೆ ನೋಡೋವನು'' ಅಂದ್ರು.

ಅಜ್ಜೀನ ಬಾಬು ತನ್ನ 4-seats aeroplane ನಲ್ಲಿ New york ಮೇಲೆಲ್ಲಾ 1 ಘಂಟೆ ತಾನೇ xxxx ಮಾಡಿ ತೋರಿಸಿದನಂತೆ. statne by liberty empire state building ಎಲ್ಲಾ ಮೇಲಿಂದ್ಲೇ ನೋಡಿದರಂತೆ. ಖುಷಿ ಆಮೇಲೆ ಹೆಮ್ಮೆ ಬೇರೆ, ತನ್ನ ಮಗ ಇಷ್ಟು ದೊಡ್ಡ ಮನುಷ್ಯ ಅಂತ. ಆಮೇಲೆ ಅನ್ನಿಸ್ತಂತೆ - ''ಇನ್ನು

ಭಗವಂತನಿಗೆ ತೊಂದರೆ ಕೊಡಬಾರದು. ಭೂಮಿತಾಯಿ ಮೇಲೆ ನನ್ನ ಇಳಿಸಪ್ಪಾ ಬಾಬು'' ಅಂದರಂತೆ.

ಅಜ್ಜೀನ ಒಂದೆರಡು ಅಮೆರಿಕನ್ ಫ್ರೆಂಡ್ಸ್ ಮನೆಗೆ ಕರೆದಿದ್ರಂತೆ. ಅಲ್ಲಿ ಡ್ರಾಯಿಂಗ್ ರೂಂ ನಲ್ಲಿ ಗೋಡೆ ಮೇಲೆಲ್ಲಾ ಹಳೇಪಳೆ ಕಬ್ಬಿಣದ ಕಾವಲಿ, ಸೌಟು, ಮೊಗಚೀ ಕೈ ಇತ್ಯಾದಿ ನೋಡಿ, ಇಷ್ಟು ಪಾಪುಲರ್ 'ಆಗಿದ್ರೆ' ಈ ಪದಾರ್ಥಗಳು ಇಂಡಿಯಾದಿಂದ Export ಮಾಡಬಹುದು. ''ಈ ಅಮೆರಿಕನ್ ಜನ ಒಂದು ತರಹ ಒಳ್ಳೆಯವರು ಆದ್ರೆ ಹುಚ್ಚರು. ಹೀಗೂ ಉಂಟೇ, ಅಲ್ಲಾ ನಾವು ಹಳೇ ಪೇಪರ್ ಕಾಲಿಸೀಸದವನಿಗೆ ಕೊಡೋ ಸಾಮಾನೆಲ್ಲ, ಚೆನ್ನಾಗಿ ಗೋಡೆಗೆ ಓರಣವಾಗಿ arrange ಮಾಡಿದಾರಲ್ಲಾ'' ಅಂತ.

ಒಂದು Indian dinner ಸಿಂಪಲ್ ಆಗಿ ಇಟ್ಟುಕೊಳ್ಳೋಣ ಅಂತ decide ಮಾಡಿದ್ರಂತೆ. ಆ ಕೆಂಪು ಮೂತಿಗಳಿಗೆಲ್ಲಾ ಗೊತ್ತಾಗಿ, ನಾವೂ ಬರುತ್ತೀವಿ ಅಂತ ಗಲಾಟೆ ಮಾಡಿದ್ರಂತೆ. ಸರೀ, ಅಜ್ಜಿ ಒಂದು ಗೊಜ್ಜಿನ ಹುಳಿಯನ್ನ, ಹಪ್ಪಳ, ಸಂಡಿಗೆ, ಮೊಸರನ್ನ, ಒಬ್ಬಟ್ಟು ಮಾಡಿಟ್ರಂತೆ. Indian friends ಗಳು ಬಿಡಿ, ಆ American friends ಎಲ್ಲಾ ಕಣ್ಣು ಮೂಗಲ್ಲೆಲ್ಲಾ ನೀರುಕಿತ್ಕೊಂಡ್ರೂ "Lovely, Lovely" ಅಂತ ಪಾತ್ರೆಗೆ ಕೈಹಾಕಿ ನೆಕ್ಕಿದ್ರಂತೆ. ನಾಚಿಕ್ಕೆಟ್ಟವ್ರು. ಆಮೇಲೆ, dessertಗೆ ಬಾಳೇಹಣ್ಣಿನ ರಸಾಯನ ಮಾಡಿದ್ರಂತೆ. ಬಾಳೇಹಣ್ಣು ಹಚ್ಚಿ, ಬೆಲ್ಲಹಾಕಿ, ತೆಂಗಿನ ಕಾಯಿ ತುರಿದು ಹಾಕಿ, ಏಲಕ್ಕಿ ಪುಡಿ ಬೆರಸಿದ್ರಂತೆ. ಎಲ್ಲಾರೂ "wow" ಅಂದ್ರಂತೆ. ಆ recape local newspaper ನಲ್ಲಿ ಹಾಕ್ಸಿ, meeting ಮಾಡಿ. ಅಜ್ಜೀನ ಕರೆದು Memento ಕೊಟ್ರಂತೆ. ಅಂತೂ ಅಜ್ಜಿ ಅಮೇರಿಕಾ ಪ್ರವಾಸ highly successful ಆಯ್ತು ಅನ್ನಿ. ಬೊಂಬಾಯಿಗೆ ಬಂದ ಕೂಡ್ಲೆ, ಮಗಳ ಮನೇಗೆ ಹೋಗಿ, shoes, socks ಎಲ್ಲಾ ಬಿಚ್ಚಿ ಬಿಸಾಕಿ, ಸಧ್ಯ ಅಂತ ಚಾಪೆ ಮೇಲೆ ಒರಗಿದ್ರಂತೆ.

2 ತಿಂಗಳ ಹಿಂದೆ 26 ವರ್ಷದ ಮೊಮ್ಮಗ Accident ನಲ್ಲಿ ಬೊಂಬಾಯಿಯಲ್ಲಿ ತೀರ್ಕೊಂಡ. ಸುದ್ದಿ ಕೇಳಿ, ಅಜ್ಜಿ ಅರ್ಧ ಜೀವ ಆದರು. ''ಭಗವಂತ ಈ ಮುದುಕೀನ ಕರೆದುಕೊಂಡು ಆ ಎಳೇ ಜೀವಾನ ಕಾಪಾಡಬಾರದಾಗಿತ್ತೇ'' ಅಂತ ಹಲುಬಿದರು.

ಅಜ್ಜಿ ಇನ್ನಿಲ್ಲ ಅನ್ನಿ. ಮೊನ್ನೆ ಬೊಂಬಾಯಿ ಮಗಳು ಬಂದು ತಾಯೀನ ಭೇಟಿಮಾಡಿದ್ಧಂತೆ. ಅವಳನ್ನ ನೋಡೋಕ್ಕೇ ಬದುಕಿದ್ರು ಅನ್ನೋ ಹಾಗೆ, ಅವಳ ಜೊತೆ ಬಾಯಿತುಂಬಾ ಮಾತನಾಡಿ, ''ಏನೋ ಉಸಿರಾಡೋದು ಕಷ್ಟವಾಗಿದೆ. ಅನ್ನಪೂರ್ಣಾ ಒಂದು ಲೋಟ ನೀರು ತೆಗೊಂಬಾಮ್ಮಾ'' ಅಂದ್ರಂತೆ. ತರೋದ್ರೊಳಗೆ ಅಜ್ಜಿ ಪ್ರಾಣಪಕ್ಷಿ ಹಾರಿಹೋಗಿತ್ತು. ಸುಲಭದ ಸಾವು ಬಂತು ಅನ್ನಿ. ಯಾರಿಗೂ ಕಷ್ಟಕೊಡದೆ, ಪರೋಪಕಾರಿ ಮೈಸೂರಜ್ಜಿ ದಢಾರ್ ಎಂದು Goodbye ಕೂಡ ಹೇಳದೇ ಹೋಗಿಬಿಟ್ರು. ಸಾವು ಅಂದ್ರೆ ಹೀಗಿರಬೇಕು ನೋಡಿ.

★★★

ಗುಂಡಪ್ಪನಿಗೆ ಏನು ಬೇಕಂತೆ?

– ಕಂ.ಭಂ. ಕೃಷ್ಣಮೂರ್ತಿ

ಕೋದಂಡರಾಮ ಮೆಡಿಕಲ್ ಸ್ಟೋರ್‌ಗೆ ಬಂದ ಗುಂಡಪ್ಪ ಮೂಗಿನ ಮೇಲೆ ಬೆರಳಿಟ್ಟುಕೊಂಡ. ಅಸಾಧ್ಯ ರಷ್ಟು. ರೇಶನ್ ಶಾಪುಗಳಲ್ಲಿ, ತರಕಾರಿ ಅಂಗಡಿಗಳಲ್ಲಿ ಈ ಪಾಟಿ ಜನ ಜಂಗುಳಿಯಿದ್ದಿದ್ದರೆ ಅವನು ಅಚ್ಚರಿ ಪಡುತ್ತಿರಲಿಲ್ಲ. ನಿತ್ಯಾವಶ್ಯಕವಾದ ಪದಾರ್ಥಗಳಿಗೆ ಜನರು ಮುಗಿ ಬೀಳುವುದು ಸಾಮಾನ್ಯ ಸಂಗತಿಯೇ ಹೌದು. ಆದರೆ ಔಷಧಿ ಕೊಳ್ಳಲು ಇಷ್ಟೊಂದು ಮಂದಿಯೆ? ಔಷಧಿಗಳು ಜನರ ನಿತ್ಯ ಆಹಾರವಾಗಿದಿಯೆ? ಹೀಗೆಲ್ಲಾ ಯೋಚನೆ ಮಾಡುತ್ತಾ ಗುಂಡಪ್ಪ ಅಂಗಡಿಯಲ್ಲಿ ನಿಂತಿದ್ದಂತೆಯೆ, ಅಂಗಡಿಯ ಹುಡುಗನೊಬ್ಬ ಬಂದು ಅವನಿಗೆ ಏನು ಬೇಕಾಗಿದೆಯೆಂದು ಕೇಳಿದ. ಗುಂಡಪ್ಪನಿಗೆ ಬೇಕಾದ ಔಷಧಿ ಅಷ್ಟೊಂದು ಮಂದಿಯೆದುರಿಗೆ ಬಹಿರಂಗವಾಗಿ ಹೇಳುವ, ಗುಟ್ಟು ಗುಮಾನವಿಲ್ಲದೆ ಕೊಳ್ಳುವ ಔಷಧಿ ಅಲ್ಲವಲ್ಲ. ಅವನಿಗೇನು ಅಳಕು, ನಾಚಿಕೆಯಿಲ್ಲವೆ? ಸೆಕ್ಸ್ ಸ್ಕ್ಯಾಂಡಲಿನಲ್ಲಿ ಸಿಕ್ಕಿ ಹಾಕಿಕೊಂಡರೂ, ಮೀಸೆ ಮಣ್ಣಾಗಲಿಲ್ಲವೆಂದು ಎದೆ ಸೆಟೆಸಿ ಓಡಿಯಾಡಲು, ಗುಂಡಪ್ಪನೇನು ಕ್ಲಿಂಟನ್ನನೆ? ''ಆಗಲಿ ಅವರಿಗೆಲ್ಲ ಕೊಡಿ. ನನಗೇನೂ ಅರ್ಜಂಟಿಲ್ಲ'' ಎಂದು ಹೇಳಿ ಅಲ್ಲೇ ಹಾಕಿದ್ದ ಬೆಂಚಿನ ಮೇಲೆ ಗುಂಡಪ್ಪ ಹಾಯಾಗಿ ಕಾಲುಚಾಚಿ ಕೂತ.

ಕೋದಂಡರಾಮ ಮೆಡಿಕಲ್ ಸ್ಟೋರಿನ ಪ್ರೊಪ್ರಾಯಿಟರ್ ಅನಂತರಾಮ ಶ್ರೇಷ್ಠಿಗಳು ಹುಟ್ಟಿದ್ದು ನರ್ಸಿಂಗ್ ಹೋಮಿನಲ್ಲಾದರೂ, ಅವರು ಬದುಕಿ ಬಾಳುತ್ತಿರುವುದೆಲ್ಲವೂ ಮೆಡಿಕಲ್ ಸ್ಟೋರಿನಲ್ಲಿಯೆ. ಆಗಿನ ಕಾಲದಲ್ಲಿ ಬಿಲ್ಲು ಗಿಲ್ಲು ಇಲ್ಲದ ಖುಲ್ಲು ಕುಲ್ಲದ ವ್ಯಾಪಾರ. ಅವರು ಮಾರಿದ್ದೆ ಔಷಧಿ. ಹೇಳಿದ್ದೆ ಬೆಲೆ. ವಾಮನನಂತೆ ಸ್ಥಾಪನೆಯಾದ ಅಂಗಡಿ, ತ್ರಿವಿಕ್ರಮನಂತೆ ಬೆಳೆದು ಉಛ್ರಾಯ ಸ್ಥಿತಿಗೆ ಬಂದು ನಿಂತಿತ್ತು. ಹಿಂದಿನ ನೇಮ ನಿಷ್ಟೇಯೆ ಈಗಲೂ ಸಾಗಿ ಬಂದಿತ್ತು. ಕೋದಂಡರಾಮ ಮೆಡಿಕಲ್ ಸ್ಟೋರಿನಲ್ಲಿ ಬಿಲ್ಲನ್ನು ಕೇಳಿಯೇ ಪಡೆಯಬೇಕು. ಇಲ್ಲದಿದ್ದರೆ ಬಿಲ್ಲೂ ಇಲ್ಲ, ಬಾಣವೂ ಇಲ್ಲ. ಸೆಟ್ಟರು ಕೊಟ್ಟದ್ದೇ ದವ. ಹೇಳಿದ್ದೇ ದರ.

ಅನಂತರಾಮ ಶ್ರೇಷ್ಠಿಗಳು ಏನು ಕಮ್ಮಿ ನೀರಿನಲ್ಲಿ ಮುಳುಗಿದವರೆ? ಗಿರಾಕಿಗಳ ಮುಖ ನೋಡಿದರೇ ಸಾಕು, ಅವರ ಪೂರ್ಣ ಜಾತಕವನ್ನೇ ಹೇಳಬಲ್ಲ ಖಧೀಮರಾಗಿದ್ದರು ಸೆಟ್ಟರು. ಬೆಂಚಿನ ಮೇಲೆ ಕೆಲಸವಿಲ್ಲದ ಕುಂಬಾರನಂತೆ ಕೂತಿದ್ದ ಗುಂಡಪ್ಪನನ್ನು ತಮ್ಮ ಆಫೀಸು ಕೋಣೆಯಿಂದಲೇ ಪರೀಕ್ಷಕ

ದೃಷ್ಟಿಯಿಂದ ನೋಡಿದರೂ, ಸೇಲ್ಸ್‌ಟ್ಯಾಕ್ಸಿನವನ, ಡ್ರಗ್ ಕಂಟ್ರೋಲನ, ಖಳನಾಯಕ ಕಳೆ ಗುಂಡಪ್ಪನ ಎಳೆನಿಂಬೆ ಮುಖದಲ್ಲಿ ಇಲ್ಲದುದನ್ನು ಗಮನಿಸಿದ ಪ್ರೊಪ್ರಾಯಿಟರು ಆತನನ್ನು ತಮ್ಮ ಕೋಣೆಗೆ ಕರೆತರುವಂತೆ ಅಂಗಡಿ ಹುಡುಗನಿಗೆ ಅಪ್ಪಣೆ ಕೊಟ್ಟು ಕಾದು ಕೂತರು.

ಗುಂಡಪ್ಪ ಹಿಂದೆ ಮುಂದೆ ನೋಡುತ್ತಾ, ಕಳ್ಳ ಹೆಜ್ಜೆಯಿಡುತ್ತಾ ಒಳಗೆ ಬಂದ. ''ಕೂಚೊಂಡಿ, ಏಮಿ ಕಾವಲ್ಲ ಮೀಕು ಎಂದು ಸೆಟ್ಟರು ರಮಿಸುವ ಧ್ವನಿಯಲ್ಲಿ ಅವನನ್ನು ಕೇಳಿದರು.

ಹುಡುಗಿಯರು ಬಂದು 'ಸ್ಟೇಫ್ರೀ' ಖರೀದಿಸುವಾಗ, ಹುಡುಗರು ಬಂದು 'ನಿರೋದ್' ಕೇಳುವಾಗ, ಕಳ್ಳದನಿಯಲ್ಲಿ ಮಾತನಾಡುತ್ತಿದ್ದುದು, ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದುದು ಅವರಿಗೆ ಅನುಭವ ವೇದ್ಯವಾಗಿತ್ತು. ಈತನಿಗೂ ಅಂಥಹ ಪದಾರ್ಥ ಏನಾದರೂ ಬೇಕಿರ ಬಹುದೆಂದು ಅವರು ಊಹಿಸಿದರು.

''ಏನು ಬೇಕು ಹೇಳಿ ಸ್ವಾಮಿ'' ಮತ್ತೊಮ್ಮೆ ನವಿರಾಗಿ ಕೇಳಿದರು.

''ಏನೂ ಇಲ್ಲ. ನನಗೆ ವ... ವ... ವ...   ಎಂದು ಗುಂಡಪ್ಪ ತೊದಲಿದ. ಅವನ ಗಂಟಲು ಗೊರಗೊರ ಶಬ್ದ ಮಾಡಿತು. ಅಷ್ಟು ಹೇಳುವ ಹೊತ್ತಿಗೆ ಮುಖದಲ್ಲಿ ಬೆವರು ಬಸಿಯಿತು. ಹೋಟೆಲಿನ ಮಾಣಿಗಳು ತಿಂಡಿಯ ಪಟ್ಟಿಯನ್ನು ಅಸ್ಖಲಿತವಾಗಿ ಹೇಳುವಂತೆ, ಸೆಟ್ಟರು ವ ಇಂದ ಶುರುವಾಗುವ ಔಷಧಿಗಳ ಲಿಸ್ಟನ್ನೇ ವದರಿದರು. ಎಲ್ಲದಕ್ಕೂ ನೇತಿ, ನೇತಿ ಎಂಬ ಜವಾಬೇ ಗುಂಡಪ್ಪನಿಂದ ಬಂದದ್ದು ನೋಡಿ   ಇನ್ನೇನು ಬೇಕು ಇವನಿಗೆ ನನ್ನ ಪಿಂಡ ಎಂದು ಹಣೆ ಚಚ್ಚಿಕೊಂಡರು.

''ಸಂಕೋಚವಿಲ್ಲದೆ ಅದೇನು ಸರಿಯಾಗಿ ಹೇಳಿದೇವರೂ...'' ಎಂದು ಸೆಟ್ಟರು ಬಹಳ ಬಲವಂತ ಮಾಡಿದ ಮೇಲೆ, ಗುಂಡಪ್ಪ ಸಣ್ಣ ದನಿಯಲ್ಲಿ ''ವಯಾಗ್ರ   .'' ಎಂದು ಹೇಳಿ ಮುಖದ ಬೆವರನ್ನು ಒರಸಿಕೊಂಡ.

ಮಧುಚಂದ್ರಕ್ಕೆ ಹೊರಟಿದ್ದ ಗುಂಡಪ್ಪನಿಗೆ ಬೇಕಾದದ್ದು ವಯಾಗ್ರವೆ. ಅವನೇನು ಅಮೃತಾಂಜನ ಕೊಂಡು ಹಣೆಗೆ ತಿಕ್ಕಿಕೊಳ್ಳಬೇಕೆ?   ಇದೇನು ಸರ್ಕಾರಿ ಕಛೇರಿ ಕೆಟ್ಟುಹೋಯಿತೇನ್ರಿ ಕಂಡಾ ಬಟ್ಟೆ ರಜೆ ಕೊಡ್ಲಿಕ್ಕೆ ಎಂದು ದುಸು ಮುಸು ಮಾಡಿ ನಾಲ್ಕೇ ದಿನ ರಜಾವನ್ನು ಅವನ ಸಾಹೇಬರು ಮಂಜೂರು ಮಾಡಿದ್ದರು. ಆದ್ದರಿಂದಲೇ ಗುಂಡಪ್ಪ ರೀಸೆಂಟಾಗಿ ಮದುವೆಯಾಗಿದ್ದವನು ಅರ್ಜಂಟಾಗಿ ಹನಿಮೂನಿಗೆ ಹೊರಟಿದ್ದ.

''ಉಪ್ಪುಂದ ಶೆಟ್ರೆ?'' ಎಂದು ಕೇಳಿದರೆ ''ಪಪ್ಪುಂದಿ'' ಎಂದು ಹೇಳುವ ಜಾಯಮಾನ ಸೆಟ್ಟರದು. ಅವರು ''ಲೇದು'' ಎಂದ್ಯಾರಿಗೂ, ಯಾವುದಕ್ಕೂ ತಾರತಮ್ಯ ಆಡಿಸಿದ ಅಭ್ಯಾಸವೇ ಇಲ್ಲ. ವಯಾಗ್ರ ಭಾರತದ ಮಾರುಕಟ್ಟೆಗೆ ಬಂದಿಲ್ಲದಿದ್ದರೂ ಅವರು ಗುಂಡಪ್ಪನಿಗೆ ಡಿಸಪಾಯಿಂಟ್ ಮಾಡಲಿಲ್ಲ. ''ವಯಾಗ್ರ ಗುಳಗಿ ಇಲ್ರಿ. ಪುಡಿ ಇದೆ. ಅದೂ ಇಂಪೋರ್ಟೆಡ್ಡು. ನಮ್ಮ ಮುಂಡಾಕೊಡಕ ಫಾರಿನ್ನಿಂದ ಕಳಿಸವ್ನೆ'' ಎಂದು ಹೇಳಿ ಸೆಟ್ಟರು ಗುಂಡಪ್ಪನ ಮುಖವನ್ನು ನೋಡಿದರು. ಗುಂಡಪ್ಪನಿಗೆ ಗುಳಿಗೆಯಾದರೇನು ಪೌಡರಾದರೇನು, ವಯಾಗ್ರ ಯಾವ ರೂಪದಲ್ಲಿದರೂ ಅವನಿಗೆ ಸಮ್ಮತವೆ, ಸೆಟ್ಟರು ಕೊಟ್ಟ ಪುಡಿಯ ನಾಲ್ಕು ಚಿಕ್ಕ ಪೊಟ್ಟಣಗಳನ್ನು ತೆಗೆದುಕೊಂಡು, ಹಣಕೊಟ್ಟು, ದುಡು ದುಡು ಮನೆಯ ಕಡೆಗೆ ಓಡಿದ ಗುಂಡಪ್ಪ.

ಕೊಡೈಕೆನಾಲಿನಲ್ಲಿ ಗುಂಡಪ್ಪ ದಂಪತಿಗಳ ಹನಿಮೂನು. ರಾತ್ರಿ ಊಟ ಮಾಡಿ, ತಾಂಬೂಲ ಚರ್ವಣವಾದಮೇಲೆ ದಂಪತಿಗಳು ಮಲಗಲು ಬೆಡ್‌ರೂಮಿಗೆ ಬಂದರು. ಗುಂಡಪ್ಪ ಪೊಟ್ಟಣದಲ್ಲಿದ್ದ ವಯಾಗ್ರ ಪುಡಿಯನ್ನು ಬಾಯಿಗೆ ಹಾಕಿಕೊಂಡು ನುಂಗಿ ನೀರು ಕುಡಿದು ಅದರ ಪರಿಣಾಮಕ್ಕಾಗಿ ಕಾದು ಕುಳಿತ, ಎರಡೇ ಕ್ಷಣದಲ್ಲಿ ಆಕಳಿಕೆ, ತೂಕಡಿಕೆ ಬಂದು ಅವನು ಗಡದ್ದು ನಿದ್ರೆಯಲ್ಲಿ ಮುಳುಗಿಯೇ ಹೋದ. ಮಾರನೆಯ ದಿನವೂ ಅದೇ ಕಾರ್ಯಕ್ರಮ. ಅದೇ ಎಫೆಕ್ಟು. ವಯಾಗ್ರ ಪುಡಿಯೂ ಮುಗಿಯಿತು. ರಜೆಯೂ ತೀರಿತು. ಸೆಟ್ಟರಿಗೆ ಹಿಡಿ ಶಾಪ ಹಾಕುತ್ತಾ ಗುಂಡಪ್ಪ ತನ್ನ ಹನಿಮೂನನ್ನು ಮುಗಿಸಿ ಆಫೀಸಿಗೆ ಮರಳಿದ.

ನಮ್ಮ ದೇಶದಲ್ಲಿ ಕಲಬೆರಕೆಗೇನು ಕೊರತೆಯೆ? ಮಾರುಕಟ್ಟೆಗೆ ಬಿಡುವ ಯಾವ ಪದಾರ್ಥಕ್ಕೇ ಆಗಲಿ ಯಥಾಶಕ್ತಿ ಕಲಬೆರಕೆ ಮಾಡದಿದ್ದರೆ ವರ್ತಕ ಧರ್ಮಕ್ಕೆ ಚ್ಯುತಿ ಬರುವುದಿಲ್ಲವೆ? ಮೆಣಸು, ಮದ್ಯ, ಮಸ್ಟರ್ಡ್ ಆಯಿಲ್ ಮುಂತಾಗಿ ಎಲ್ಲಾಕ್ಕೂ ಕಲಬೆರಕೆ ಮಾಡುವ ಖಧೀಮರು ನಮ್ಮಲ್ಲಿರುವಾಗ, ಸೆಟ್ಟರು ವಯಾಗ್ರದ ಕಲಬೆರಿಗೆ ಮಾಡಿದರೆ ಸೋಜಿಗವೇನು ಬಂತು, ಪಾರಿನ್ನಲ್ಲಿದ್ದ ಅವನ ಮುಂಡಾಕೊಡಕು ಕಳಿಸಿದ್ದ ಎರಡು ಒರಿಜಿನಲ್ ವಯಾಗ್ರ ಮಾತ್ರೆಯನ್ನು ಕುಟ್ಟಿ ಪುಡಿಮಾಡಿ, ಒಂದು ಅಂಶ ವಯಾಗ್ರ ಪುಡಿಗೆ, ತೊಂಬೊತ್ತೊಂಭತ್ತು ಅಂಶ ನಿದ್ರೆ ಮಾತ್ರೆಯ ಪುಡಿಯನ್ನು ಸೇರಿಸಿ, ಲೋಕಲ್ಲಾಗಿ ವಯಾಗ್ರ ಪೌಡರನ್ನು ಸೆಟ್ಟರು ತಯಾರಿಸಿದ್ದರು. ಕದ್ದು ಮುಚ್ಚಿ, ಗುಂಡಪ್ಪನಂತಹ ಬಕ್ರಾ, ಗಿರಾಕಿಗಳಿಗೆ ಹೆಚ್ಚು ಹಣಕ್ಕೆ ಅವರು ಮಾರುತ್ತಿದ್ದರು. ಸೆಟ್ಟರು ಕೊಟ್ಟ ವಯಾಗ್ರ ಪುಡಿಯನ್ನು ನುಂಗಿ ನೀರು ಕುಡಿದ ಗುಂಡಪ್ಪನಿಗೆ ಗಡದ್ದು ನಿದ್ದೆ ಬರದೆ ಮತ್ತೇನಾದೀತು?

ಅಪೂರ್ವ ಮಿಲನ

– ಶಿವು

ಹೋಟೆಲ್ ''ಸುಧಾ ಪ್ಯಾರಡೈಸ್''ನ ರೆಸ್ಟುರಾಂಟ್ ತಕ್ಕಮಟ್ಟಿಗೆ ''ಪಾಷ್'' ಅಂತಲೇ ಹೇಳಬಹುದು. ತೀರ ಎತ್ತರವಿಲ್ಲದ ಮೇಜು, ಶುಭ್ರವಾಗಿ ಒಗೆದು ಇಸ್ತ್ರಿಮಾಡಿದ, ಅಂಚು ಹರಿದಿಲ್ಲದ ಕೆಂಪು ಬಿಳುಪಿನ ಚೌಕಳಿಯ ಟೇಬಲ್ ಕ್ಲಾತ್, ನಿಜವಾದ ಲೆದರ್ ಹೊದಿಕೆಯ ಸೋಫಾ, ಮೇಜಿನ ಮೇಲಿನ ಹೂವಿನ ಕುಂಡದಲ್ಲಿ ಆಗತಾನೇ ಅರಳಿದ ಕೆಂಪು ಗುಲಾಬಿ (ಹೂವಿನ ಮೇಲೆ ದಾರಿತಪ್ಪಿ ತಿರುಗಾಡುತ್ತಿದ್ದ ಕಪ್ಪು ಇರುವೆ, ಆ ಹೂವಿನ ಹುಟ್ಟನ್ನು ಸಾಬೀತು ಮಾಡಿತ್ತು), ಒಟ್ಟಿನಲ್ಲಿ ನಿರಾಳ ಮನಸ್ಸಿನಿಂದ ಆರಾಮವಾಗಿ ಕೂತು ಬೀರು ಹೀರಬೇಕಾದರೆ ಹೇಳಿ ಮಾಡಿಸಿದ ಜಾಗ, ನಮ್ಮ ಶಿವಣ್ಣನ ''ಸುಧಾ ಪ್ಯಾರಡೈಸ್.'' ಶಿವಣ್ಣ ನನ್ನ ಹಳೆಯ ಮಿತ್ರ. ನಾನು ಸರ್ಕಾರಿ ಚಾಕರಿಗೆ ಸೇರಿದ ಸುಮಾರಿನಲ್ಲಿ ಶಿವಣ್ಣ ತನ್ನ ಇಡ್ಲಿ, ವಡೆ ಫಾಸ್ಟ್‌ಫುಡ್ ಸರ್ವೀಸ್ ಶುರು ಮಾಡಿದ್ದ. ಈಗ ಅವ ತ್ರೀ ಸ್ಟಾರ್ ಹೋಟೆಲ್ ಮಾಲೀಕ.

ಹೆಂಡತಿ ಊರಿನಲ್ಲಿಲ್ಲದ ಕಾರಣ ಆ ಸಂಜೆ ನಾನು ಶಿವಣ್ಣನ ಆತಿಥ್ಯ ಸ್ವೀಕರಿಸುವ ನಿರ್ಧಾರ ಮಾಡಿದ್ದೆ. ಸಂಜೆ ಏಳೂಮುಕ್ಕಾಲಿಗೆ ರೆಸ್ಟುರಾಂಟ್ ಸೇರಿ ಇತರ ಗಿರಾಕಿಗಳಿಗೆ ಅನಾನುಕೂಲವಾಗದಿರಲೆಂದು ಒಂದು ಮೂಲೆ ಟೇಬಲ್ ಹಿಡಿದು, ಸುತ್ತ ದೃಷ್ಟಿ ಹಾಯಿಸಿದೆ. ಇನ್ನೂ ಒಂದು ನರ ಪಿಳ್ಳೆಯೂ ಅಲ್ಲಿ ಕಾಲಿಟ್ಟಿರಲಿಲ್ಲ. ಬೇರರ್ ಮೂರ್ತಿ ಬಂದು

''ನಮಸ್ಕಾರಾ ಸಾರ್'' ಅಂತ ಸ್ವಾಗತಿಸಿದ.

''ಶಿವಣ್ಣೋರಿಲ್ವೇನೋ''

''ಇವತ್ತು ಸ್ವಲ್ಪ ಲೇಟಾಗಿ ಬರ್ತಾರಂತೆ ಸಾರ್. ಯಜಮಾನ್ರಿಗೆ ಏನು ಕೊಡಲಿ?'' ಮೂರ್ತಿ ಕೇಳಿದ.

''ಇನ್ನೇನು! ನನ್ನ ಮಾಮೂಲಿ ನಿನಗೆ ಗೊತ್ತೇ ಇದೆ, ಅದನ್ನೇ ತಾ ಮೂರ್ತಿ'' ಅಂತ ಹೇಳಿದೆ.

ನನ್ನ ಮಾಮೂಲಿ ಅಂದ್ರೆ, ಒಂದ್ರು ಡ್ರಾಫ್ಟ್ ಬೀರು, ಒಂದು ವೆಜ್ ಫ್ರೈಡ್ ರೈಸ್, ಅಷ್ಟೇ. ಮೂರ್ತಿ ಬೀರಿನ ಜೊತೆ ಒಂದು ತಟ್ಟೆ ಖಾರದ ಕಡಲೇಬೀಜ ಕೂಡ ತಂದಿಟ್ಟ. ಒಂದು ಗುಟುಕು ಬೀರು ಹೀರಿ ಒಂದೆರಡು ಕಡಲೇ ಬೀಜ ಬಾಯಿಗೆ ಹಾಕಿದೆ. ಅತಿ ಅಪ್ಯಾಯಮಾನವಾದ ಶಾಂತ ಭಾವನೆಯೊಂದು

ನಾಲಿಗೆಯಲ್ಲಿ ಜನ್ಮ ತಳೆದು, ಅತಿ ನಿಧಾನವಾಗಿ ದೇಹದಲ್ಲೆಲ್ಲಾ ಹರಡಲು ಪ್ರಾರಂಭಿಸಿತು. ಅದೇ ಕ್ಷಣದಲ್ಲಿ ರೆಸ್ಟುರಾಂಟಿನ ಬಾಗಿಲು ಒಳಕ್ಕೆ ತೆರೆಯಿತು.

ತೆರೆದ ಬಾಗಿಲಿನಿಂದ ಒಬ್ಬ ಮಹಿಳೆ ಒಳಕ್ಕೆ ಆಗಮಿಸಿದಳು. ಸುಮಾರು ಮೂವತ್ತೈದು ವಯಸ್ಸು. ಆಕಾಶನೀಲಿಯ ಸೀರೆ, ಅದಕ್ಕೆ ತಕ್ಕಂತಹ ಕುಪ್ಪಸ. ಸಾಧಾರಣ ಎತ್ತರ. ಕಳೆಕಳೆಯಾದ ಮುಖ. ಆಕೆ ಒಮ್ಮೆ ಆಚೀಚೆ ನೋಡಿ, ಅನಂತರ ನನ್ನಿಂದ ಮೂರನೆಯ ಟೇಬಲ್ಲಿನ ಬಳಿ ಸಾಗಿ ಕೈಲಿದ್ದ ವ್ಯಾನಿಟಿ ಚೀಲವನ್ನು ಮೇಜಿನ ಮೇಲಿಟ್ಟು ನನಗೆ ಬೆನ್ನು ಮಾಡಿ ಕುಳಿತಳು. ತನ್ನ ಹೊರವಾದ ಅಲೆಅಲೆಯಾದ ಕಪ್ಪು ಕೂದಲನ್ನು ಆಕೆ ಕಲಾತ್ಮಕವಾಗಿ ಕಟ್ಟಿದ್ದ ರೀತಿ ನಿಜಕ್ಕೂ ಆಕರ್ಷಕವಾಗಿತ್ತು. ಯಾರಿಗೋ ಕಾಯುತ್ತಿದ್ದಳೆಂದು ಕಾಣುತ್ತದೆ. ಆಕೆಯ ನೋಟ ಆಗಾಗ ಬಾಗಿಲ ಕಡೆ ಹರಿಯುತ್ತಿತ್ತು.

ಮೂರ್ತಿ ಬಂದು ನನ್ನ ಮುಂದೆ ಸೈಡ್ ಪ್ಲೇಟ್, ನ್ಯಾಪ್ಕಿನ್, ಫೋರ್ಕ್ ಚಮಚ ಇಟ್ಟು ಹೋದ. ಬೀರ್ ಮುಗಿಯುತ್ತಾ ಬಂದಿತ್ತು. ರೆಸ್ಟುರಾಂಟಿನ ಬಾಗಿಲು ಮತ್ತೊಮ್ಮೆ ತೆರೆಯಿತು. ಈ ಬಾರಿ ಸೂಟು ಬೂಟ್ ಹಾಕಿದ್ದ ಶಿಸ್ತುಗಾರ ಪುಟ್ಟಸ್ವಾಮಿಯೊಬ್ಬ ಒಳಕ್ಕೆ ಪ್ರವೇಶಿಸಿದ. ನಲವತ್ತೈದು ವಯಸ್ಸಿರಬಹುದು. ತಲೆ ಪೂರ್ತಿ ಬೋಳಾಗಿತ್ತು. ಧಡೂತಿ ಆಸಾಮಿ. ಒಳಕ್ಕೆ ಬಂದವನೇ ಆತ ನೇರವಾಗಿ ರೆಸ್ಟುರಾಂಟಿನ ಆಕಡೆ ತುದಿಯ ಮೇಜಿಗೆ ಹೋಗಿ ನಮ್ಮಿಬ್ಬರಿಗೆ ಅಭಿಮುಖವಾಗಿ ಕುಳಿತ. ನನ್ನ ಮುಂದೆ ಕುಳಿತಿದ್ದ ಮಹಿಳೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಆತ ಆ ಜಾಗವನ್ನು ಆರಿಸಿದ್ದನೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂಶಯ ಇರಲಿಲ್ಲ. ಅಷ್ಟು ಹೊತ್ತಿಗೆ ಮೂರ್ತಿ ಫ್ರೈಡ್ ರೈಸ್ ತಂದು ನನ್ನ ಮುಂದಿಟ್ಟು ಪಕ್ಕದ ಮೇಜಿನಿಂದ ವಿನೆಗರ್ ತಟ್ಟೆಯನ್ನು ತರುತ್ತಿದ್ದಂತೆ ಆ ಧಡೂತಿ ಆಸಾಮಿ ಕೈಸನ್ನೆ ಮಾಡಿ ಮೂರ್ತಿಯನ್ನು ಕರೆದ. ವಿನೆಗರ್‌ನಲ್ಲಿ ತೇಲುತ್ತಿದ್ದ ಹಸಿರು ಮೆಣಸಿನಕಾಯಿ ತುಣುಕುಗಳನ್ನು ಬದಿಗೆ ಸರಿಸಿ, ಒಂದೆರಡು ಚಮಚ ವಿನೆಗರನ್ನು ಅನ್ನದ ತಟ್ಟೆಗೆ ಚುಮುಕಿಸಿ ತಲೆ ಎತ್ತಿ ನೋಡಿದೆ. ಧಡೂತಿ ಆಸಾಮಿ ಮೇಜಿನ ಮೇಲಿದ್ದ ಹೂವಿನ ಕುಂಡದಿಂದ ಅರಳಿದ ಕೆಂಪು ಗುಲಾಬಿಯೊಂದನ್ನು ತೆಗೆದು, ಜೇಬಿನಿಂದ ತೆಗೆದ ವಿಸಿಟಿಂಗ್ ಕಾರ್ಡ್‌ನ ಹಿಂದೆ ಅದೇನೋ ಗೀಜಿ ಮೂರ್ತಿಯ ಕೈಗೆ ಕೊಟ್ಟ. ಮೂರ್ತಿ ಈ ಮೇಘಸಂದೇಶವನ್ನು ಅತಿ ನಿಷ್ಠೆಯಿಂದ ತಂದು ಆ ಮಹಿಳೆಯ ಕೈಗೆ ಕೊಟ್ಟ. ಓಹೋ ಏನೋ ವ್ಯವಹಾರ ನಡೆಯುತ್ತಿರುವ ಹಾಗಿದೆಯಲ್ಲಾ ಎಂದುಕೊಂಡು ಆ ಮಹಿಳೆಯ ಕಡೆ ನೋಡಿದೆ. ಆಕೆ ರೇಗಿ ಗುಲಾಬಿಯನ್ನು ಬಿಸುಡುವ ಬದಲು ಆಸಾಮಿಯ ಚೀಟಿಯನ್ನು ಓದಿ ಗುಲಾಬಿಯನ್ನು ಹೆರಳಿಗೇರಿಸಿದಳು. ನನ್ನ ಮುಂದೆ ತೆರೆದುಕೊಳ್ಳುತ್ತಿದ್ದ ನಾಟಕವನ್ನು ನಾನು ತೀವ್ರ ಆಸಕ್ತಿಯಿಂದ ನೋಡಲಾರಂಭಿಸಿದೆ.

ಧಡೂತಿ ಆಸಾಮಿ ಈಗ ಎದ್ದು ಆಕೆಯ ಮೇಜಿಗೆ ಬರುತ್ತಿದ್ದ, ''ಎಷ್ಟಾದರೂ ಒಬ್ಬನೇ ಕೂತು ಊಟ ಮಾಡುವುದೆಂದರೆ ಬೇಜಾರು. ನಿಮ್ಮ ಜೊತೆ ಕೂತು ಮಾತನಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದಕ್ಕೆ ನಿಮಗೆ ಹೃದಯಪೂರ್ವಕ ವಂದನೆಗಳು'' ಅನ್ನುತ್ತಾ ಆತ ಆಕೆಯ ಮುಂದೆ ಕುಳಿತೇಬಿಟ್ಟ. ಅವರಿಬ್ಬರು ಆಡುತ್ತಿದ್ದ ಮಾತುಕತೆ, ಕಿಲಕಿಲ ನಗು ಇವೆಲ್ಲಾ ನನಗೆ ಅರ್ಥಂಬರ್ಥ ಕೇಳಿಸುತ್ತಿತ್ತು. ಬೇರೆಲ್ಲಾದರೂ ಹೀಗಾಗಿದ್ದರೆ ನನಗೇನೂ ಅನ್ನಿಸುತ್ತಿರಲಿಲ್ಲ. ಆದರೆ ಶಿವಣ್ಣನ ಹೋಟೆಲಿನಲ್ಲಿ ಈಕೆ ತನ್ನ ಧಂಧೆ ಪ್ರಾರಂಭ ಮಾಡಿದ್ದು ಕಂಡು ನನಗೆ ಸ್ವಲ್ಪ ಕೋಪವೇ ಬಂದಿತ್ತು ಅನ್ನಿ. ಅಲ್ಲದೇ ಇವರ ವ್ಯವಹಾರಕ್ಕೆ ಶಾಮೀಲಾದ ಮೂರ್ತಿಯ ಲಾಯಲ್ಟಿ ಬಗ್ಗೆ ನನಗೆ ಸಹಜವಾಗಿಯೇ ಸಂಶಯ ಹುಟ್ಟಿತ್ತು. ಬಿಲ್ಲಿಗೂ ಕಾಯದೇ ಎದ್ದು ನೇರವಾಗಿ ಶಿವಣ್ಣನ ಆಫೀಸಿಗೆ ನಡೆದೆ. ಶಿವಣ್ಣ ಆಗತಾನೇ ಬಂದಿದ್ದ.

''ಸಾರಿ ಗುರು, ನಿನಗೆ ಕಂಪೆನಿ ಕೊಡೋಣ ಅಂತಲೇ ಇದ್ದೆ. ಯಾವ್ದೋ ಕೆಲಸ ಅಡ್ಡ ಬಂತು. ಇಷ್ಟು ಬೇಗ ಡಿನ್ನರ್ ಮುಗಿಸಿಬಿಟ್ಯಾ?'' ಅಂತ ಕುಶಲ ವಿಚಾರಿಸ್ದ.

''ಊಟವೇನೋ ಆಯ್ತು ಶಿವ, ಆದ್ರೆ ನಿನ್ನ ಹೋಟೆಲ್ ರೆಪ್ಯುಟೇಷನ್ ಬಗ್ಗೆ ನನಗೆ ತೀರ ಯೋಚನೆ ಆಗಿದೆ'' ಅಂದೆ.

''ಯಾಕೋ, ಏನಾಗಿದೆ, ಅಂಥದ್ದೂ?'

''ಇನ್ನೇನಾಗ್ಬೇಕು. ಈ ಬಡಾವಣೆ ರತೀರೆಲ್ಲಾ ತಮ್ಮ ವ್ಯಾಪಾರಕ್ಕೆ ನಿನ್ನ ರೆಸ್ಟುರಾಂಟ್‌ನ ಖರ್ಚಿಲ್ಲದೇ ಬಳಸ್ತಿರೋದು, ಇದರಿಂದ ಮಿಕ್ಕ ಸಭ್ಯ ಗಿರಾಕಿಗಳ ಮೇಲೆ ಆಗಬಹುದಾದ ಪರಿಣಾಮ ಇದೆಲ್ಲಾ ಗೊತ್ತೇನೋ?''

ಒಂದು ನಿಮಿಷ ಶಿವಣ್ಣ ಅವಾಕ್ಕಾದ. ಅನಂತರ ನಗುಕ್ಕೆ ಶುರು ಮಾಡಿದ.

''ಆಕಾಶನೀಲಿಯ ಸೀರೆ, ಸೂಟು ಬೂಟಿನ ಸಮಾಚಾರಾನ?''

''ಹೌದು, ನಿನಗೆ ಗೊತ್ತಿರೋ ಸಂಗತಿಯೇನು ಅದು?''

''ಅದೊಂದು ಹಳೇ ಕಥೆ ಗುರು. ನಾನು ರೆಸ್ಟುರಾಂಟ್ ಪ್ರಾರಂಭಿಸಿದಾಗಿನಿಂದ ಅವರಿಬ್ಬರೂ ವರ್ಷಕ್ಕೊಮ್ಮೆ ತಪ್ಪದೇ ಇಲ್ಲಿಗೆ ಬರ್ತಿದಾರೆ. ಆರು ವರ್ಷದ ಹಿಂದೆ ಅವರಿಬ್ಬರು ಇಲ್ಲಿ ಭೇಟಿ ಮಾಡಿದ್ದರಂತೆ. ಅದರ ನೆನಪಿಗೆ ಪ್ರತಿವರ್ಷ ಅದೇದಿನ ಅದೇ ದೃಶ್ಯಾನ ಪುನಃ ರೀ ಎನ್ಯಾಕ್ಟ್ ಮಾಡ್ತಾ ಬಂದಿದಾರೆ. It keeps us young ಅಂತಾನೆ ಶ್ರೀಧರರಾಯ.''

''ಯಾರು ಆ ಹೆಂಗಸು?''

''ಅದು ಹೆಂಗಸಲ್ವೋ, ಅವನ ಹೆಂಡ್ತೀ

ರಾ.ಶಿ.ಯವರ ಅಪ್ರಕಟಿದ ಲೇಖನಗಳ ರಾಶಿಯಿಂದ

ಮುಪ್ಪಿನ - ಮಂಡಿಗೆ

ಲೋಕ ಜೀವನದಲ್ಲಿ ಎಷ್ಟೆಲ್ಲಾ ಅಂದ
ಬಾಳ ರೀತಿಗಳಲ್ಲಿ ಏನೆಲ್ಲ ಚೆಂದ
ಇವನೆಲ್ಲ ಬಣ್ಣಿಸುವ ಆ ಪುಸ್ತಕಗಳೋ
ಅವನೆಲ್ಲ ಬರೆದಿಟ್ಟ ಹಿರಿಯಾತ್ಮರೋ?

ಓದುಗನ ಎದೆಗೆ ಮುತ್ತಿಡುವಂತೆ
ಬೋಧಿಸಿಹರವರು ವಿಶ್ವನೀತಿಯನು
ಬಾದರಾಯಣನ ಬಳ್ಳಿಯಂತಿರುವವರು
ಸಾಧಕರು, ಹೊತ್ತಗೆಗಳ ಬರೆದಿಹರು

ಇವುಗಳೆಲ್ಲವ ಓದಿ ಹಿರಿ ಹಿಗ್ಗುವಾಸೆ
ಭವಿ! ನನ್ನಂತಹನಿಗೆ ವಿರಾಮವೆಲ್ಲಿ?
ಕವಿದಿದೆ ಸುತ್ತಲೂ ಬಾಳ ಹೋರಾಟ
ಸವಿಯಲು ಅವಕಾಶವೆಂತು?

ಮುಪ್ಪು ಅಡರಿದಾಗ, ವಿಶ್ರಾಂತಿ ದೊರೆತಾಗ
ಒಪ್ಪಿ ಮೆಚ್ಚಿದ ಹೊತ್ತಗೆಗಳ ನೋಡುವೆ
ಚಪ್ಪರಿಸುವೆ, ಅವುಗಳ ಸವಿಯುಂಡು
ಎನುತ ಮಂಡಿಗೆಯ ಮನಸ್ಸಿನಲ್ಲಿ ಉಂಡೆ

ಮುಪ್ಪು ಬಂತು
ಒಪ್ಪಿದ ಹೊತ್ತಗೆಗಳು ಸುತ್ತ.
ಆ ಹೊತ್ತಗೆಯು ಎಲ್ಲಿ?
ಎಲ್ಲಿಟ್ಟೆ?
ಕಣ್ಣು ಕಾಣಿಸಿದಲ್ಲ!
ಎಲ್ಲೋ? ಹಾಳು ಕನ್ನಡಕ!

ಕನ್ನಡಕವ ಹುಡುಕುತ್ತ
ಮುಪ್ಪನ್ನು ಕಳೆದೆ

(ಆಕಾಶವಾಣಿ ಕೃಪೆ-4-9-67 ರಂದು ಬಿತ್ತರಗೊಂಡಿದೆ)



ಲೋನ್ ಮೇಳದ್ ಕಾಲ್ದಾಗ ದೊಡ್ಡಿಂಗೀ ಲಗ್ನ ಮಾಡ್ದೆ.
ಪ್ರವಾಹ ಪರಿಯಾರ ಏನ್ರ ಸಿಕ್ರೆ ಚಿಕ್ಕಿಂಗೀನೂ ದಾಟಸ್ಬಿಡೋವ ಅಂತಿವ್ನಿ

ಇಷ್ಟ ದೇವತೆ ಅಂದ್ರೆ.....

– ನಾಗೂಶ್ರೀ ಸೂರಿ

ಆಯಿತು ರಾಯರೇ - ಪೂಜೆ ಹೆಚ್ಚು ಕಡಿಮೆ ಎಲ್ಲಾ ಮುಗಿದ ಹಾಗೇನೆ. ಇನ್ನು ನೀವು ನಿಮ್ಮ ಇಷ್ಟ ದೇವತೇನ್ನ ನೆನಸಿಕೊಂಡು ಅದೇನು ಮನಸ್ನಲ್ಲಿದ್ಯೋ ಅದನ್ನು ಕೋರಿಕೊಂಡಿತೂ ಅಂದ್ರೆ ಮಂಗಳಾರತಿ ಮುಗಿಸಿಬಿಡಬಹುದು

ಇಷ್ಟ ದೇವತೇ ಅಂದ್ರೆ? - ಮನೆ ದೇವ್ರೂ, ಇಷ್ಟ ದೇವತೇ ಅನ್ನೋದು ಎಲ್ಲಾ ಒಂದೇ ಅಲ್ಲವೇ?

ಹಯ್ಯೋ ಎಲ್ಲಿ ಬಂತು? ಅದೇ ಬೇರೆ, ಇದೇ ಬೇರೆ.

ಅದೇನು ವ್ಯತ್ಯಾಸಾನೋ ಅಂತೀನಿ

ಮತ್ತೆ ಅದೂ... ಮನೆದೇವರೂ... ಇಷ್ಟ ದೇವತೇ... ಅದೂ... ಅದೂ... ಶಾಸ್ತ್ರಿಗಳಿಗೆ ತುಂಬಾನೇ ಪೇಚಾಟಕ್ಕೆ ಬಂದಿತ್ತು. ಕಾಲದಿಂದ ಏನಾಗತಾ ಬಂದಿತ್ತು? ಇಷ್ಟ ದೇವತೇನ್ನ ನೆನಸಿಕೊಳ್ಳಿ ಅಂತ ಇವರು ಹೇಳೋದು, ಆ ಪೂಜೆ ಕರ್ತೃಗಳು ಹೂ ಅಂತ ತಲೆ ಆಡಿಸೋದು - ಇಷ್ಟು ಆಗತಾ ಇತ್ತೇ ಹೊರತು, ಆ ಇಷ್ಟ ದೇವತೇ ಅನ್ನೋದು ಏನೂ ಅಂತ ಯಾರೂ ಕೇಳಿರಲಿಲ್ಲ - ಇವರಿಗೆ ಗೊತ್ತೂ ಇರಲಿಲ್ಲ.

ಮನೆ ದೇವರೂ... ಮತ್ತೆ... ಮತ್ತೆ...

ಹಯ್ಯೋ ಹೋಗಲಿ ಬಿಡಿ, ಶಾಸ್ತ್ರಿಗಳೇ. ಅದಕ್ಕೆ ಯಾಕೆ ಇಷ್ಟು ಒದ್ದಾಟ? ಎರಡೇ ಮಾತ್ನಲ್ಲಿ ನಾನು ಹೇಳಲೇ - ಅದು ಏನು ವ್ಯತ್ಯಾಸಾ ಅನ್ನೋದನ್ನ? - ರಾಯರ ಹೆಂಡತಿ ಕಮಲಮ್ಮನವರು ನಡುವೆ ಬಾಯಿ ಹಾಕಿದರು. ಸದ್ಯ ಈ ಪೂಜೇ, ಮಂಗಳಾರತಿ ಅನ್ನೋ ವ್ಯಾಪಾರ ಮುಗಿದರೆ ಎಲೆ ಹಾಕಬಹುದಲ್ಲ ಅಂತ ಅವರ ಯೋಚನೆ ಅವರಿಗೆ.

ನಿನ್ನ ಥಲೆ! ಓ ಅಂದ್ರೆ ಸರಿಯಾಗಿ ಠೋ ಅನ್ನಕ್ಕೆ ಬರೊಲ್ಲ - ಬಂದ್ಲು, ಶಾಸ್ತ್ರಿಗಳಿಗೇ ಬುದ್ಧಿ ಹೇಳಕ್ಕೆ

ಹಯ್ಯೋ ಯಾಕೆ ಬೇಡ ಅಂತೀರಿ ಅಮ್ಮಾವ್ರನ್ನ? - ಸರಿಯೋ ತಪ್ಪೋ, ಅದು ಬೇರೆ ಮಾತು ಆಯಿತು, ಹೇಳಿ, ತಾಯಿ - ಸದ್ಯ, ಈ ಕತ್ರೀ ಪಟ್ಟಿಂದ ತಪ್ಪಿಸಿಕೊಂಡರೆ ಸಾಕು ಅಂತಿತ್ತು. ಶಾಸ್ತ್ರಿಗಳಿಗೆ. ಅಮ್ಮಾವರು ನಿಧಾನವಾಗಿ ಹೇಳಿದರು:

ಹರಿವಾಯು ಪ್ರೇರಣೆ, ಗುರು ಹಿರಿಯರು ನಿಶ್ಚಯ ಅಂತ ಇವರ ಕೈನಲ್ಲಿ ತಾಳಿ ಕಟ್ಟಿಸಿಕೊಂಡು ಮೂವತ್ತು ವರ್ಷದಿಂದ ಈ ಮನೇಲಿ ಇದ್ದೀನಲ್ಲ - ಆ ನಾನು ಇವರಿಗೆ ಮನೆ ದೇವರು -

ಹಂಗಾದರೆ ನನ್ನ ಇಷ್ಟ ದೇವತೆ ಯಾರೋ? - ರಾಯರ ವ್ಯಂಗದ ಪ್ರಶ್ನೆ.

ಪಕ್ಕದ ಮನೆ ರಾಜಯ್ಯಂಗಾರ್ರರ ಮಗಳು - ಅದೇ, ಆ ಮಿಟುಕಲಾಡಿ ದೇವಕಿ.

ಅಪರಂಜಿಯ ಅಂತದೃಷ್ಟಿ

– ಶಿಲಾಬಾಲಿಕೆ

ಬಹಳ ದಿವಸಗಳಾಗಿತ್ತು ಅಪರಂಜಿ ಕಂಡು. ಮನೆ ಹತ್ರ ಹೋದೆ. ಮನೆ ಬಿಕೋ ಅನ್ನಿತ್ತು. ಅಪರಂಜಿ ಮನೇಲಿದಾಳೋ ಇಲ್ವೋ ಗೊತ್ತಾಗ್ಲಿಲ್ಲ, ಖಾಲಿ ಇದ್ದ ಕುರ್ಚೀಲಿ ಕೂತು ಅವತ್ತಿನ ಪೇಪರ್ ಬಿಡಿಸಿದೆ. ನನ್ನ ಊಹೆ ಸರಿಯಾಗಿತ್ತು ಅಪರಂಜಿ ಮನೇಲಿರ್ಲಿಲ್ಲ. ಒಂದು ಬ್ಯಾಗ್ ಹಿಡ್ಕೊಂಡು ಅಪರಂಜಿ ಬಂದಳು.

''ಏನಪರಂಜಿ ಷಾಪಿಂಗ್ ಹೋಗಿದ್ಯಾ'' ಅಂದೆ

''ಅಚ್‌ಕಟ್ಟಾಗಿ ಅಂಗಡಿಗೆ ಹೋಗಿದ್ಯಾ ಅಂತ ಕೇಳು. ಅದೇನು ಷಾಪಿಂಗು, ಪಾಪಿಂಗು ಅಂತ... ಒಂದೆರಡ್ ಕೆಜಿ ಉಪ್ ತರಕ್ಕೆ ಹೋಗಿದ್ದೆ'' ಅಂದಳು

''ಎರಡು ಕೆಜಿ ಉಪ್ಪಾ... ಏನು ಮನೇಲಿ ಔತಣಾನಾ...''

''ಎಂಥದು ಇಲ್ಲ, ಮನೇಲಿ ಬಿದ್ದಿರ್ಲಿ ಅಂತ''

''ಅದ್ಸರಿ.. ನಿಂಗೆ ಬಿ.ಪಿ. ಷುರುವಾಗ್ತಿದೆ, ಡಾಕ್ಟ್ರು ಉಪ್ ಕಡಿಮೆ ಮಾಡಿ ಅಂದಿದಾರೆ ಅಂತ ಹೇಳಿದ ಹಾಗಿತ್ತು''

''ಹೌದು ಹೇಳಿದ್ರು... ಬಾಯಿ ರುಚಿಗೆ ಬೇಕಾದಷ್ಟಾದರೂ ಹಾಕ್ಕೋಬೇಕು ಅಲ್ವೆ''

''ಒಪ್ಪಿದೆ. ಆದ್ರೆ ಇರೋಳು ಒಬ್ಬಳು ಕೇಜಿಗಟ್ಲೆ ಉಪ್ಪು ಯಾಕೆ ತಂದ್ಕೊಂಡೆ ಅಂತ''

''ಈ ಊರು ವಿಚಾರ ನಿಂಗೊತ್ತಲ್ಲ... ಜನ ಮರುಳೋ ಜಾತ್ರೆ ಮರುಳೋ ಅಂತ... ಇಲಿ ಹೋದ್ರೆ ಹುಲಿ ಹೋಯ್ತು ಅಂತ ಪರದಾಡ್ತಾರೆ... ಮೊನ್ನೆ ಪೇಪರಲ್ಲಿ ಬಂದಿತ್ತು ನೋಡು ಡೆಲ್ಲೀಲಿ ಉಪ್ಪು ಸ್ಟಾಕ್ ಇಲ್ದೆ ಜನ ಹಾಹಾಕಾರ ಪಟ್ಟು ಕೇಜಿಗಟ್ಲೆ ಉಪ್ ತೆಗೆದಿಟ್ಕೊಂಡ್ರು ಅಂತ''

''ಆ ಕಾಯಿಲೆ ಡೆಲ್ಲಿಯಿಂದ ಬೆಂಗಳೂರಿಗೂ ಬಂತಾ''

''ಬರಲಿಲ್ಲ... ಬರೋ ಹಾಗೆ ಮಾಡ್ಕೊಂಡ್ರು... ಯಾರೋ ಒಬ್ರು ಅಂಗಡಿಗೆ ಹೋಗಿ ಒಂದ್ ಕೆಜಿ ಉಪ್ ಕೊಡಿ ಅಂದ್ರು... ಅವನು ಸ್ಟಾಕಿಲ್ಲ ಅಂದ. ಇನ್ನೊಂದಂಗಡಿಗೆ ಹೋದ್ರು... ಅವನೂ ಸ್ಟಾಕಿಲ್ಲ ಅಂದ... ಹೀಗೆ ಹತ್ತಾರು ಅಂಗಡೀಲೂ ಸ್ಟಾಕಿರಲಿಲ್ಲ. ಅದು ವಾಸ್ತವ. ಯಾವುದೋ ಒಂದಂಗಡೀಲಿ ಸ್ಟಾಕಿತ್ತು ಬಹಳ ಹಳೇದು. ಸರಿ ಇಲ್ಲಾದ್ರೂ ಇದೆಯಲ್ಲ ಅಂತ ಒಂದ್ ಕೆಜಿ ತಗೊಂಡ್ ಬಂದ್ರು ದಾರೀಲಿ ಬರ್ತಾ ಈ ಊರಲ್ಲಿ ಉಪ್ಪಿಗೆ ಬರ ಬಂತಲ್ಲಪ್ಪ... ಎಲ್ ಕೇಳಿದ್ರೂ ಇಲ್ಲ ಅಂತಿದಾರೆ ಅಂತ ಒಂದ್ ಮಾತು ಅಂದ್ರಂತೆ. ಅದು ಜನರಿಂದ ಜನರಿಗೆ ಬಾಯಿಂದ ಬಾಯಿಗೆ ಹರಡಿ ಊರಲ್ಲಿ ಉಪ್ಪಿಲ್ಲ ಅನ್ನೋ ಸುದ್ದಿ ಹರಡ್ತು''

''ಅದು ನಿನ್ ಕಿವಿಗೂ ಬಿದ್ದು ನೀನೂ ಬ್ಯಾಗ್ ಹಿಡ್ಕೊಂಡ್ ಹೊರಟ್ಯಾ''

''ಇನ್ನೇನ್ ಮಾಡ್ಲಿ... ಪದ್ಧಿ ಹೇಳಿದ್ದೇ ತಡ ನಾನೂ ಓಡ್ದೆ. ಅಲ್ ನೋಡಿದ್ರೆ ನೂಕು ನುಗ್ಗಲು. ಇಬ್ಬರು ಪೋಲೀಸಿನವರು ಬೇರೆ. ಎರಡು ಕೆಜಿ ಉಪ್ಪು ತರೋ ಹೊತ್ಗೆ ಎರಡು ಗಂಟೆ ಆಯ್ತು.''

''ಒಂದ್ ಮಾತು ಅಪರಂಜಿ, ಯಾವ ಪದಾರ್ಥ ತುಟ್ಟಿಯಾಗುತ್ತೋ ಅದನ್ನ ಜನ ತಿನ್ನೋದೇ ಬಿಟ್‌ಬಿಡಬೇಕು ಆಗ ಬೆಲೆನೂ ಹತೋಟಿಗೆ ಬರುತ್ತೆ ಪದಾರ್ಥವೂ ಸಿಗುತ್ತೆ ಏನಂತೀಯ''

''ನೀ ಹೇಳೋದು ಕರಕ್ಟು... ಜನರ ವೀಕ್‌ನೆಸ್ ನಿಂಗೆ ಗೊತ್ತಿಲ್ವ ಯಾವುದು ಸಿಗಲ್ವೋ ಅದು ಬೇಕೇ ಬೇಕು ಅನ್ನೋ ಹಟ. ಈಗ ನೋಡು ನಾನು ಈರುಳ್ಳಿ ತಿನ್ನೋದ್ನ ಬಿಟ್ಟೇಬಿಟ್ಟಿದೀನಿ... ಹಾಗಂತ ಈರುಳ್ಳಿ ಬೆಲೆ ಕಡಿಮೆ ಆಯ್ತೇ''

''ಅದ್ಸರಿ... ನೀನೂ ನಾನು ತಿನ್ನೋದ್ ಬಿಟ್ರೆ ಸಾಕೇ''

''ಅಂತೂ ಈ ದೇಶಕ್ಕೆ ಸುಭಿಕ್ಷವಾದ ಕಾಲ ಬರ್ತಿದೇಂತ ಕಾಣುತ್ತೆ''

''ಹೇಗೆ ಹೇಳ್ತೀಯ''

''ನಾ ಹೇಳ್ತಿಲ್ಲ... ಇದು ನಮ್ಮಜ್ಜಿ ಹೇಳಿದ್ದ ಮಾತು... ಬೇರೆ ಪದಾರ್ಥದ ಬೆಲೆಗಿಂತ ಉಪ್ಪಿನ ಬೆಲೆ ಹೆಚ್ಚಾದರೆ ದೇಶ ಸುಭಿಕ್ಷವಾಗುತ್ತೆ ಅಂತ. ಅದನ್ನೇ ಕಾಯ್ತಿದೀನಿ ನಾನು'' ಅಂದಳು.

''ಅಪರಂಜಿ ಈ ಕಲಿಯುಗ ಎಲ್ಲ ಅಜ್ಜ ಅಜ್ಜಿಯರ ಮಾತನ್ನು ಸುಳ್ಳು ಮಾಡಿ ಹಾಕ್ತಿದೆ...''

''ಇರಬಹುದು ಈ ಉಪ್ಪಿನ ತುಟ್ಟಿಯಿಂದ ಯಾರಿಗೆ ಲಾಭ ಹೇಳು''

''ಇನ್ನಾರಿಗೆ... ವರ್ತಕರಿಗೆ''

''ಅವರಿಗೆಲ್ಲ ಇನ್ನೊಂದು ಐಡಿಯಾ ಕೊಟ್ ಬಂದಿದೀನಿ''

''ಏನು''

ತಿಂಗಳ ಮೊದಲಲ್ಲಿ ಬಹಳ ಮುಖ್ಯವಾದ ವಸ್ತುಗಳಾದ ಎಣ್ಣೆ, ಬೇಳೆ ಮುಂತಾದುವುಗಳನ್ನ ಎಲ್ಲ ಅಂಗಡಿಯೋರು ಸ್ಟಾಕಿಲ್ಲ ಸ್ಟಾಕಿಲ್ಲ ಅನ್ನಬೇಕು. ಒಂದು ಅಂಗಡೀಲಿ ಮಾತ್ರ ಸ್ಟಾಕಿರಬೇಕು. ಎಲ್ರೂ ಆ ಅಂಗಡೀಗೆ ನುಗ್ತಾರೆ ಒಂದಕ್ಕೆ ಹತ್ರಷ್ಟು ಕೊಳ್ತಾರೆ. ಬೇರೆ ಅಂಗಡೀಲಿರೋ ಮಾಲುಗಳು ಹಿಂದಿನ ಬಾಗಿಲಿಂದ ಆ ಅಂಗಡಿಗೆ ಹೋಗ್ತಿರುತ್ತೆ ಹೀಗೆ ಊರಲ್ಲಿರೋ ಎಲ್ಲಾ ಅಂಗಡೀಲಿರೋ ಮಾಲುಗಳು ಒಂದೇ ಅಂಗಡಿ ಮುಖಾಂತರ ಹೆಚ್ಚಿನ ಬೆಲೆಗೆ ಖರ್ಚಾಗಿಬಿಡುತ್ತೆ. ಹೀಗೆ ಒಂದೊಂದು ತಿಂಗಳು ಒಂದೊಂದು ಐಟಂ... ಹೇಗಿದೆ ನನ್ನೈಡಿಯ''

''ಬೊಂಬಾಟಾಗಿದೆ... ಅಂದ್ಹಂಗೆ ಅಂಗಡಿಯೋರು ಇದಕ್ಕೆ ಒಪ್ಪಿದ್ರಾ''

''ಒಪ್ದೇಏನು ತಿಂಗಳಿಗೆ ಐದು ಕೆಜಿ ಅಕ್ಕಿ... ಎರಡು ಕೆಜಿ ಎಣ್ಣೆ ಫ್ರೀ ಕೊಡ್ತೀನಿ ಅಂದಿದಾರೆ... ತಾಳು ಕಾಫಿ ಮಾಡ್ಕೊಂಡ್ ಬರ್ತೀನಿ'' ಅಂತ ಅಪರಂಜಿ ಒಳಗೆ ಹೋದಳು.

ಸಾರ್ವಜನಿಕ ಕಲ್ಲಿಡ್ಲಿ ಸೇವೆ

- ಬಿ.ಆರ್. ನಾಗೇಶ್

ಚೆನ್ನರಾಯಪಟ್ಟಣಕ್ಕೆ ಬಸ್ಸು ತಲುಪಿದಾಗ ಬೆಳಗ್ಗಿನ ಒಂಭತ್ತುಗಂಟೆ ಆಗಿತ್ತು. ಯಾವ ಹಾಳಾದ ಗಡಿಯಾರವೂ ಒಂಭತ್ತನ್ನಲ್ಲದೆ ಬೇರೆ ಸಮಯವನ್ನು ತೋರುವುದು ಅಸಾಧ್ಯವಾಗಿತ್ತು. ಮಧ್ಯರಾತ್ರಿ ಮೂರುಗಂಟೆಗೆ ಬಸ್ ಚೆನ್ನರಾಯಪಟ್ಟಣವನ್ನು ದಾಟಬೇಕಾಗಿದ್ದರೂ, ಬೆಳಗ್ಗೆ ಆರು ಗಂಟೆಗೆ ಬೆಂಗಳೂರು ತಲುಪಬೇಕೆಂದಿದ್ದರೂ, ಅಂದು ಸ್ಥಿತಿ ಬದಲಾಗಿತ್ತು; ಕಾರಣ ಬಸ್ಸಿನೊಳಗಿದ್ದ ಮೂವತ್ತು ಜನರ ಜಾತಕವೂ ಒಮ್ಮೆಗೆಯೇ ಶನಿದೆಸೆಗೆ ಒಳಗಾದದ್ದು - ಮತ್ತು ಘಾಟಿ ರಸ್ತೆ ಯಲ್ಲಿ ಕಬ್ಬಿಣದ ರಾಕ್ಷಸ ತೊಲೆಗಳನ್ನು ಹೇರಿಕೊಂಡು ಬರುತ್ತಿದ್ದ ವಾಹನವೊಂದು ಚಕ್ರಮುರಿದು ಬಿದ್ದದ್ದು.

ಚೆನ್ನರಾಯಪಟ್ಟಣದಲ್ಲಿ ಬಸ್ ನಿಂತಿತು - ಕಂಡೆಕ್ಟರನ ದೇವವಾಣಿ ಕೇಳಿಸಿತು ''ಎಲ್ಲರೂ ಕಾಫಿ ಕುಡಿದು ಬನ್ನಿ-ಬೇಗ'' ಎಲ್ಲರೂ ದಡದಡವಾಗಿ ಬಸ್ಸಿನಿಂದ ಕೆಳ ಹಾರಿದರು. ಕಾಫಿ ಕುಡಿಯುವುದಕ್ಕಿಂತ ಮಿಗಿಲಾದ ಒಂದು ಒತ್ತಡ ಅವರ ದೇಹದೊಳಗೆ ಉಂಟಾಗಿತ್ತು. ಹಿಂದಿನ ದಿನ ರಾತ್ರಿ ಒಂಭತ್ತುವರೆಗೆ ಬಸ್ಸಿನೊಳಗೆ ಕುಳಿತವರಿಗೆ, ಹದಿನೆರಡು ಗಂಟೆಕಾಲದ ವಿಚಿತ್ರ ಸುಖ ಪ್ರಯಾಣದ ಬಳಿಕ ಒಮ್ಮೆಯೂ ಕೆಳಗಿಳಿದು ಸುತ್ತಲಿನ ಪ್ರಕೃತಿಯನ್ನು ಆನಂದದಾಯಕವಾಗಿ ನೋಡುತ್ತಾ, ಮೈನೀರು ಇಳಿಸುತ್ತಾ ನಿಂತಿರುವ ಸಂದರ್ಭ ಸಿಗದಾದ ಬಳಿಕ - ಹೋಟೆಲ್ ಕಂಡೊಡನೆ ಅದರ ಒಳಗೋಡಿದ್ದು ಅರ್ಥಪೂರ್ಣವಾಗಿತ್ತು. ಪುಣ್ಯಕ್ಕೆ ಬಸ್ಸಿನ ಸೀಟುಗಳಲ್ಲಿ ಒದ್ದೆಯಾದ ಗುರುತುಗಳಿರಲಿಲ್ಲ. ನಾನೂ ಮೆಲ್ಲನೆ ಕೆಳಗಿಳಿದೆ. ನನ್ನ ನಿಧಾನಕ್ಕೆ ಕಾರಣ ಬಸ್ಸಿನೊಳಗಿದ್ದೇ ನಾನು ಮೈನೀರನ್ನು ಕಳೆದುಕೊಂಡಿದ್ದೆ - ಪ್ಲಾಸ್ಟಿಕ್ ಚೀಲದ ಮೂಲಕ.

ಬಸ್ಸಿನಿಂದ ಕೆಳಗಿಳಿದು, ಕೈಕಾಲನ್ನೊಮ್ಮೆ ಜಾಡಿಸಿ, ಎದುರುಗಡೆ ಇದ್ದ ಹೋಟೆಲಿನತ್ತ ಕಣ್ಣು ಹಾಯಿಸಿದಾಗ ನನಗೆ ಕಂಡದ್ದು, ಇಷ್ಟು:

ಹೋಟೆಲಿನ ಪಕ್ಕದಲ್ಲಿಯೇ ದೊಡ್ಡದೊಂದು ಶಾಮಿಯಾನ ಹಾಕಿತ್ತು. ಒಳಗಿನಿಂದ ನಾದಸ್ವರವಾದನ ಕೇಳಿಸುತ್ತಿತ್ತು. ಶಾಮಿಯಾನದ ಹೊರಗೆ ದೊಡ್ಡದೊಂದು ಬ್ಯಾನರ್ ಕಾಣಿಸಿತು; ಅದರ ಮೇಲೆ ''ಸಾರ್ವಜನಿಕ ಕಲ್ಲಿಡ್ಲಿ ಪೂಜೆ'' ಎಂದು ಬರೆದಿತ್ತು. ಸಾರ್ವಜನಿಕ ಗಣೇಶೋತ್ಸವ, ಸಾರ್ವಜನಿಕ ಸತ್ಯನಾರಾಯಣ ಕತೆ, ಸಾರ್ವಜನಿಕ ಮದುವೆ, ಸಾರ್ವಜನಿಕ ಉಪನಯನ,

ಸಾರ್ವಜನಿಕ ಮೂತ್ರ ಶಂಕೆ ಇತ್ಯಾದಿಗಳೆಲ್ಲವೂ ಸಾಮಾನ್ಯವಾಗಿರುವ ಈ ಕಾಲದಲ್ಲಿ ಕಲ್ಲಿಡ್ಲಿಯ ಸಾರ್ವಜನಿಕ ಪೂಜೆ ಏನೆಂದು ನನಗೆ ಅರ್ಥವಾಗಲೇ ಇಲ್ಲ. ಕಲ್ಲಿಡ್ಲಿ ಎಂದರೇ ದೇವರೇ? ದೇವಿಯೇ? ದೇವರಾಗಿದ್ದರೆ, ದೇವತೆಯಾಗಿದ್ದು ಇವರು ಹುಟ್ಟಿದ್ದು ಇತ್ತೀಚೆಗೆಯೆ? ಅಥವಾ ಹರಪ್ಪಾ ಸಂಸ್ಕೃತಿಯಿಂದ ಬಂದವರೇ? ಇಂಥಾ ನೂರಾರು ಗುಮಾನಿಗಳನ್ನು ತಲೆಯಲ್ಲಿ ಇಟ್ಟುಕೊಂಡು, ಹೋಟೆಲಿನೆಡೆ ಕಾಲು ಹಾಕಿದೆ. ಹೋಟೆಲು ಮುಟ್ಟಬೇಕೆಂಬುವಷ್ಟರಲ್ಲಿ ತಟಕ್ಕನೆ ಯಾರೋ ಒಬ್ಬ ಹುಡುಗ ಬಂದು ನನ್ನ ಕೈಗೊಂದು ಮುದ್ರಿತ ನೋಟೀಸು ಕೊಟ್ಟ ಕೈಯಲ್ಲಿದ್ದ ಡಬ್ಬಿಯನ್ನು ಮುಂದೂಡಿದ. ನಾನು ತಲೆ ಅಲ್ಲಾಡಿಸಿ, ನೋಟಿಸನ್ನು ಮಾತ್ರ ಪಡಕೊಂಡು ಹೋಟೆಲಿನ ಒಳಗೆ ಹೋದೆ. ನೋಟಿಸು ಚೆನ್ನಾಗಿತ್ತು - ಬೆಂಗಳೂರಿನ ಮುದ್ರಣವಿರಬೇಕು. ಅದರ ತಲೆ ಭಾಗದಲ್ಲಿ ಯಾವುದೋ ಒಂದು ದೇವರ ಹೆಸರದ್ದುನಮಃ ಎಂದಿತ್ತು. ಇದನ್ನೋದಿದ ಕೂಡಲೇ ನನ್ನ ದಿವ್ಯದೃಷ್ಟಿ ಉದ್ದೀಪನಗೊಂಡಿತು. ಬಸ್ ಹಾಳಾಗಿ, ಪ್ರಯಾಣಿಕರೆಲ್ಲಾ ಅದರಿಂದ ಕೆಳಗಿಳಿದು ಬಸ್ಸನ್ನು ಹಲವಾರು ಕೋನಗಳಿಂದ ಪರೀಕ್ಷಿಸುತ್ತಿರುವಾಗ, ನನಗೆ ಹೆಚ್ಚಾಗಿ ಈ ದಿವ್ಯದೃಷ್ಟಿ ಬರುವುದಿದೆ.

ಇಡ್ಲಿ ಕೌಟುಂಬಿಕ ಜೀವನದ ಆರಾಧ್ಯದೇವತೆ. ವೇದಕಾಲದಿಂದಲೂ ನಮ್ಮವರು ಇಡ್ಲಿ ತಿನ್ನುತ್ತಿದ್ದುದಕ್ಕೆ ಹಲವಾರು ಸೂಕ್ತಗಳಲ್ಲಿ ಉದಾಹರಣೆಗಳಿವೆ. ಋಷಿಗಳು ಬೆಳಗ್ಗೆ ಎದ್ದೊಡನೆಯೆ, ಪ್ರಾತರ್ವಿಧಿಗಳನ್ನು ತೀರಿಸಿ, ನೇರವಾಗಿ ಇಡ್ಲಿಯನ್ನೆ ತಿನ್ನುತ್ತಿದ್ದರು - ಎಂಬುದೂ ಇಂದು ಸ್ವಾಮಿಗಳಿಂದ ಸಿದ್ಧವಾಗಿದೆ. ಅನ್ನಬ್ರಹ್ಮ ಎಂಬ ಶಬ್ದ ಮೂಲದಲ್ಲಿರುವುದು ಇಡ್ಲಿ ಬ್ರಹ್ಮ ಎಂಬ ಅಭಿಪ್ರಾಯವೇ. ಹಾಗಾಗಿ ಅಂತಹ ಸನಾತನ ಖಾದ್ಯವನ್ನು ನಾವು ಸದಾಕಾಲ ದೇವರಂತೆ ಪೂಜಿಸುವುದು ಮನೆಯ ಸುಖಸಂಪತ್ತು ಆರೋಗ್ಯದ ದೃಷ್ಟಿಯಿಂದ ಸೂಕ್ತವಾದದ್ದು.

ವೇದ, ಉಪನಿಷತ್, ಪುರಾಣಗಳಲ್ಲಿ ಇಡ್ಲಿ ಬೇಯಿಸುವ ಹೊಣೆಯನ್ನು ಗಂಡಸರು ಹೊತ್ತಿದ್ದರು ಎಂಬುದಕ್ಕೆ ಪುರಾವೆಗಳಿಲ್ಲ. ಆದರೆ ಅಂಥಾ ದೇವಕಾರ್ಯ ಹೆಂಗಸರಿಂದ ಮಾತ್ರ ಸಾಧ್ಯ ಎಂಬ ತಿಳುವಳಿಕೆ ದೇವತೆಗಳಿಗೂ ಇದ್ದುದರಿಂದ, ಇಡ್ಲಿ ತಯಾರಿಸುವ ಚಳಕವನ್ನು ಸ್ತ್ರೀಯರ ಕಿವಿಯೊಳಗೆಯೆ ಪಿಸುಗುಟ್ಟಿದವರು ದೇವತೆಗಳೇ. ಹೀಗಾಗಿ ಇಡ್ಲಿ ಹೆಂಗಸರ ಸೃಷ್ಟಿ-ದೇವರ ಆಶೀರ್ವಾದದ ಪರಿಣಾಮ. ಇಂಥ ಇಡ್ಲಿಯಲ್ಲಿ ಎರಡು ಬಗೆಗಳಿರುತ್ತವೆ - ಒಂದು ಹೂ ಇಡ್ಲಿ; ಇನ್ನೊಂದು ಕಲ್ಲಿಡ್ಲಿ.

ಜನ್ಮದಾರಭ್ಯ ಗಂಡನನ್ನು ದೇವರೆಂದೇ ಪೂಜಿಸುವ ಹೆಂಗಸರು ತಯಾರಿಸುವ ಇಡ್ಲಿಯೇ ಹೂ ಇಡ್ಲಿ. ಇದು ಅಷ್ಟು ನಾಜೂಕಿನ ಇಡ್ಲಿ. ಹೂವಿನ ಏಕಳೆಯಷ್ಟು ನುಣುಪು. ಬಾಯಿಗೆ ಹಾಕಿದೊಡನೆಯೇ ತಿಂದವನ ಅಜ್ಞಾನ ಹೋಗಿಬಿಡುತ್ತದೆ. ಆತ ಹೆಚ್ಚು ಕಡಿಮೆ ಸುಷುಪ್ತಿ ಸ್ಥಿತಿಗೆ ಸೇರುತ್ತಾನೆ. ಇಂಥಾ ಅದ್ಭುತ ಇಡ್ಲಿ ತಯಾರಿಸಬೇಕಾದರೆ, ಸ್ತ್ರೀಯರಲ್ಲಿ ಅಂಥಾ ಗುಣವಿರಬೇಕು. ದಿನವೂ ಎದ್ದೊಡನೆ ಗಂಡನ ಪಾದಪೂಜೆ ಮಾಡಿ ಸ್ನಾನಾದಿಗಳ ನಂತರ ಆತನನ್ನು ಭಯಭಕ್ತಿಯಿಂದ ಅಡುಗೆ ಕೋಣೆಯ ಪಕ್ಕದ ಕೋಣೆಗೆ ಕರೆದೈದು ''ಪ್ರಿಯಾ, ಬಿಸಿ ಬಿಸಿ ಇಡ್ಲಿ ತರಲೇ? ಅಪ್ಪಣೆಯಾಗಬೇಕು. ಚಟ್ನಿಯೇ ಬೆಣ್ಣೆಯೇ? ಮೊಸರೇ? ಏನು ಬೇಕು ಹೇಳಿ'' ಎಂದು ಆ ಸಾಧ್ವಿಮಣಿ ಕೇಳಬೇಕು - ಆಗ ಗಂಡನಾದವ ಆಯಾಯ ದಿನದ ಮನೋಸ್ಥಿತಿಯನ್ನು ಹೊಂದಿಕೊಂಡು ತನಗೆ ಬೇಕಾದ ಖಾದ್ಯ ತರಲು ಆಜ್ಞೆ ಕೊಡುತ್ತಾನೆ. ಸಾಧ್ವಿ ಅಡುಗೆ ಮನೆಯೊಳಗೆ ಹೋಗಿ, ಇಡ್ಲಿ ಬೆಣ್ಣೆ ಮೊಸರು ಸಾಂಬಾರು ತರುತ್ತಾಳೆ - ಗಂಡನ ಇದುರು ಇಟ್ಟು, ತಾನು ಮಾರುದ್ದ ದೂರ ನಿಂತು, ಪತಿದೇವ ಇಡ್ಲಿ ತಿನ್ನುವುದನ್ನೇ ನೋಡುತ್ತಾ, ಜನ್ಮಪಾವನ ಮಾಡಿಕೊಳ್ಳುತ್ತಾಳೆ. ಇಂಥಾ ಸಾಧ್ವಿ ತಯಾರಿಸಿದ ಇಡ್ಲಿಯೇ ಹೂ ಇಡ್ಲಿ. ಇದಕ್ಕೆ ಪೂಜೆ ಇಲ್ಲ- ಇದನ್ನು ತಯಾರಿಸುವ ಸಾಧ್ವಿಗೂ ಪೂಜೆ ಇಲ್ಲ.

ಕಲ್ಲಿಡ್ಲಿ ದೇವರಾಗಿ ನಮ್ಮೆದುರಿಗೆ ಬಂದಿರುವುದು ಅದರ ಹಿಂದಿರುವ ಸ್ತ್ರೀರತ್ನದ ಕಠೋರ ಮನಸ್ಸಿನ ಪ್ರತೀಕವಾಗಿ ಮಾರಿ ಬಾರದಂತೆ ಮಾರಿದೇವತೆಗೆ ಪೂಜೆ ಇದ್ದಂತೆ, ಸಂಸಾರದಲ್ಲಿ ಏನೇನೂ ಹೊಂದಿಕೆ ಇಲ್ಲದೆ ದಿನವೂ ಗಂ-ಹೆಂ ಕಾಳಗ ನಡೆಯುತ್ತಲೇ ಇದ್ದರೆ, ಅದನ್ನು ಕೊನೆಗೊಳಿಸಲೆಂದೇ ಕಲಿಯುಗದಲ್ಲಿ ಅವತರಿಸಿದ್ದು ಕಲ್ಲಿಡ್ಲಿ. ಇದು ಒಂದು ರೀತಿಯ ಹೋಮಿಯೋಪತಿ ಔಷಧದ ಗುಣ ಇದ್ದಂಥದ್ದು. ಇದರ ಮೂಲ ಹೀಗಿದೆ:

ಗಂಡ ಸರಕಾರಿ ನೌಕರ. ಹೆಂಡತಿಗೆ ಸ್ವಲ್ಪ ಸಿನೇಮಾದ ಹುಚ್ಚು; ಒಳ್ಳೊಳ್ಳೇ ತಿಂಡಿ ತಿನ್ನಬೇಕು, ಬಟ್ಟೆ ಬರೆ ತೊಟ್ಟುಕೊಳ್ಳಬೇಕೆಂಬ ಆಸೆ. ಒಮ್ಮೊಮ್ಮೆ ವಜ್ರದ ಬೆಂಡೋಲೆ ಬೇಕು ಎಂದು ಹೊಟ್ಟೆ ಉಬ್ಬರಿಸುವುದೂ ಇತ್ತು. ಸರಿ. ಗಂಡನ ಸಂಬಳದಿಂದ ಇವೆಲ್ಲವೂ ಸಾಧ್ಯವಿಲ್ಲ. ಸಿನೇಮಾ ಯಾವಾಗಲೂ ಪುಕ್ಕಟೆ ನೋಡಬೇಕಾದರೆ ಆತ ಅಗ್ನಿಶಾಮಕ ದಳದಲ್ಲಿ ಆಫೀಸರನೇ ಆಗಿರಬೇಕು - ಆದರೆ ಈತ ಕಂದಾಯ ಇಲಾಖೆಯಲ್ಲಿರುವ ಗುಮಾಸ್ತ. ತಿಂಗಳಿಗೊಂದು ಸಿನೇಮಾ ಹೆಂಡತಿಗೆ ತೋರಿಸಿದರೆ ಹೆಚ್ಚು. ತಿಂಡಿಗಳನ್ನು ಆಕೆ ಮಾಡುತ್ತಾಳೆ - ಕೆಲವೊಮ್ಮೆ ಹೋಟೆಲಿನಿಂದ ತರಲು ಹೇಳುತ್ತಾಳೆ. ಗಂಡ, ಆ ದಿನಕ್ಕೆ ಬೆಚ್ಚಗೆ ಆಗಿದ್ದರೆ - ಹೋಟೆಲಿನಿಂದ ತಿಂಡಿ ತರುತ್ತಾನೆ. ಹೊಸ ಬಟ್ಟೆ ಬರೆಗಳು

ಬೇಕೆಂದಾಗ, ಆಫೀಸಿನಲ್ಲಿ ಅವನ ಅಂಗೈ ವಿಸ್ತೀರ್ಣ ಹೆಚ್ಚಾಗಬೇಕಾಗಿದೆ. ಸರಿ ಅದರಲ್ಲಿಯೂ ಗಂಡ ಯಶಸ್ವಿಯಾದ ಎನ್ನಿ. ಅವಳಿಗೆ ಸೀರೆ ರವಕೆ ಸಲ್ವಾರ್ ಕಮೀಜ್ ಬರುತ್ತದೆ. ಆದರೆ ಆ ದೇವತೆಗೆ ಇದರಿಂದ ತೃಪ್ತಿ ಇಲ್ಲ. ಹಟ ಹಿಡಿದೇ ಬಿಟ್ಟಳು - ತನಗೆ ವಜ್ರದ ಬೆಂಡೋಲೆ ಬೇಕೇಬೇಕೆಂದು. ಈ ಬಡಪ್ರಾಣಿ ವಜ್ರದ ಬೆಂಡೋಲೆಯನ್ನು ತರುವುದಾದರೂ ಎಲ್ಲಿಂದ? ಯಾವ ಸ್ವರ್ಣಕಾರನೂ ವಜ್ರದ ಬೆಂಡೋಲೆಯನ್ನು ಕಂತಿನ ಮೇಲೆ ಕೊಡಲಾರ. ವಜ್ರದ ಬೆಂಡೋಲೆಗೂ ತಾನು ಹುಟ್ಟಿದ ನಕ್ಷತ್ರಕ್ಕೂ ತಾಳಮೇಳವಿಲ್ಲ, ತನ್ನ ಜಾತಕದಲ್ಲಿ ವಜ್ರದ ಬೆಂಡೋಲೆಯನ್ನು ಕಣ್ಣೆತ್ತಿ ನೋಡುವ ಭಾಗ್ಯದ ಸೂಚನೆಯೂ ಇಲ್ಲವೆಂದು, ದಿನಕ್ಕೆ ಎರಡು ಬಾರಿ ಕಣ್ಣೀರು ಹಾಕಿ, ಹೆಂಡತಿಯೊಡನೆ ಹೇಳಿಕೊಂಡ. ಕಲ್ಲಿನ ದೇವರ ಎದುರು ಭಕ್ತರ ಕಣ್ಣೀರಿಗೆ ಏನು ಬೆಲೆ? ಸರಿ. ಹೆಂಡತಿಯ ಮನಸ್ಸು ಕಲ್ಲಾಗತೊಡಗಿತು - ಹೃದಯ ವಜ್ರವಾಗುವ ಮೊದಲ ಹೆಜ್ಜೆಯಂತೆ. ಅವಳ ಹೃದಯ ಕಲ್ಲಾದದ್ದು ಗಂಡನಿಗೆ ಕಾಣಿಸಿದ್ದು ಕಲ್ಲಿಡ್ಲಿ ರೂಪದಲ್ಲಿ.

ಹಿಂದಿನ ದಿನ ಮೂರು ಬಾರಿ ಆಕೆಯ ಎದುರು ಕೂಗಿ ಆಗಿತ್ತು - ವಜ್ರದ ಬೆಂಡೋಲೆ ಸಾಧ್ಯವೇ ಇಲ್ಲವೆಂದು. ಮರುದಿನ ಬೆಳಗ್ಗೆ ಎಂದಿನಂತೆ ಇಡ್ಲಿ ಬಂತು ಎಂದಿನಂತೆ ಹೂ ಇಡ್ಲಿ ಅದಾಗಿರಲಿಲ್ಲ. ನಡುವೆ ಗಟ್ಟಿಯಾಗಿದ್ದು ಬದಿ ಮೆತ್ತಗೆ ಇತ್ತು. ಈತ ಮೆತ್ತಗಿನ ಭಾಗ ಮಾತ್ರ ತಿಂದು, ಗಟ್ಟಿ ಭಾಗವನ್ನು ಬಿಟ್ಟು, ಇನ್ನೇನು ಮೇಲೇಳಬೇಕು ಎಂಬ ಪ್ರಾಯತ್ನದಲ್ಲಿದ್ದಾಗ, ಹೆಂಡತಿ ಎಂಬ ದೇವಿ ಹೇಳಿಯೇಬಿಟ್ಟಳು: ''ಇದು ಯಾರಿಗೆ ಬಿಟ್ಟದ್ದು? ಇದನ್ನು ಯಾರು ತಿನ್ನುತ್ತಾರೆ? ಗಂಡ ಬಿಟ್ಟದ್ದನ್ನು ಹೆಂಡತಿ ತಿನ್ನುವ ಕಾಲ ಆಗಿ ಹೋಗಿದೆ. ಯಾವ ಗಂಡ ವಜ್ರದ ಬೆಂಡೋಲೆ ತಂದು ಕೊಡುವುದಿಲ್ಲವೋ, ಅಂಥಾ ಗಂಡನ ಎಂಜಲು ಹೆಂಡತಿ ತಿನ್ನಬಾರದು ಎಂಬ ಶಾಸ್ತ್ರ ಉಂಟು, ಗೊತ್ತಾ? ತಿನ್ನಿ ಅದನ್ನು ಒಳ್ಳೇ ಮಾತಿನಲ್ಲಿ. ತಿನ್ನದಿದ್ದರೆ ನಾಳೆಯಿಂದ ಇಡ್ಲಿ ಬಂದ್'' ಪಾಪ. ಗಂಡ ಎಂಬ ಹುಳ, ಇಡ್ಲಿಯ ಗಟ್ಟಿ ಭಾಗವನ್ನು, ನೀರು ಕುಡಿಯುತ್ತಾ ಗಂಟಲಿನ ಒಳಗೆ ತುರುಕಿದ. ಮುಂದಿನ ನಾಲ್ಕು ದಿನ ಇದೇ ಬಗೆಯ ಇಡ್ಲಿ ಅವನಿಗೆ ಸಿಕ್ಕಿತು. ತಿಂದ. ಒಂದು ವಾರದಲ್ಲಿ ಇಡಿಯ ಇಡ್ಲಿ ಕಲ್ಲಾಯಿತು. ಅದನ್ನು ತಿನ್ನಲು ಪ್ರಯತ್ನಿಸಿದ - ಸಾಧ್ಯವಾಗಲಿಲ್ಲ - ಚೂರಿ ತಂದು ಇಡ್ಲಿಯನ್ನು ಸಣ್ಣ ಸಣ್ಣಾಗಿ ತುಂಡರಿಸಿ, ಗಂಟಲೊಳಗೆ ಹಾಕಿ, ನೀರಿನ ಪೂರೈಕೆಯೊಡನೆ ಅದನ್ನು ಅನ್ನನಾಳದ ಮೂಲಕ ಹೊಟ್ಟೆಗೆ ತಳ್ಳಿದ. ಹೊಟ್ಟೆಗೆ ಸರಕಾರ ಹಾಕುವ ಕಾಂಕ್ರೀಟ್ ಹಾಕಿದಂತಾಯಿತು. ಆಫೀಸಿನಿಂದ ಸಂಜೆ ಮನೆಗೆ ಬರುವ ತನಕವೂ ಅವನಿಗೆ ಹಸಿವೇ ಆಗಲಿಲ್ಲ. ಧನ್ಯ-ಮಧ್ಯಾಹ್ನ ಊಟದ ದುಡ್ಡು ಉಳಿಯಿತು ಎಂದ. ಮುಂದೆ ತನ್ನ ಧಮಳದೇವತೆ ತಯಾರಿಸಿ ಕೊಡುವ ಕಲ್ಲಿಡ್ಲಿಯನ್ನು ದಿನವೂ ಸಂತೋಷದಿಂದ ತಿನ್ನತೊಡಗಿದ. ಹೆಂಡತಿಗೆ ಸಂಶಯ

ಬಂತು: ಕಲ್ಲಿಡ್ಲಿಯನ್ನು ಈತ ಇಷ್ಟು ಸಲೀಸಾಗಿ ತಿನ್ನುವುದನ್ನು ಕಂಡು - ಅವಳೂ ಒಂದು ಕಲ್ಲಿಡ್ಲಿ ತಿಂದಳು- ಪರಿಣಾಮ-ಸರಕಾರಿ ಆಸ್ಪತ್ರೆಗೆ ಹೋದದ್ದು. ಇಷ್ಟರಲ್ಲಿ, ಸ್ನೇಹಿತನೊಬ್ಬ ಗುಟ್ಟಾಗಿ ಗಂಡನೊಡನೆ ಹೇಳಿದ ಮಾತಿದು: ''ಧೈರ್ಯವಾಗಿರು. ಅವಳು ಕೊಟ್ಟ ಕಲ್ಲಿಡ್ಲಿಗೆ ದಿನವೂ ಬೆಳಗ್ಗೆ ಪೂಜೆ ಮಾಡು. ಒಂದು ತಿಂಗಳೊಳಗೆ ಅವಳ ಮನಸ್ಸು ಮೃದುವಾಗುತ್ತದೆ.''

ಆಗಲೇ ಗಂಡನಿಗೆ ಸಾರ್ವಜನಿಕ ಕಲ್ಲಿಡ್ಲಿ ಪೂಜೆಯ ಕಾರ್ಯಕ್ರಮ ಹೊಳೆದದ್ದು. ಊರಲ್ಲಿ ಯಾರ ಮನೆಯಲ್ಲಿ ಕಲ್ಲಿಡ್ಲಿ ತಯಾರಾಗುತ್ತದೆಯೋ, ಯಾರು ಯಾರ ಮನೆಯಲ್ಲಿ ವಜ್ರದ ಬೆಂಡೋಲೆ ಮಾತು ಮಾತಿನ ಮಧ್ಯೆ ಕಾಣಿಸಿಕೊಳ್ಳುತ್ತಿದೆಯೋ, ಅಂಥಾ ಮನೆಗಳ ಯಜಮಾನರೆಲ್ಲ ಕಲ್ಲಿಡ್ಲಿಯನ್ನು ಮೂವತ್ತು ದಿನಗಳ ವರೆಗೆ ಪೂಜೆ ಮಾಡಬೇಕು. ಇದರಿಂದ ದೇವಿಯವರಿಗೆ ತೃಪ್ತಿಯಾಗಿ, ಅವರು ಬಳಿಕ ಹೂ ಇಡ್ಲಿ ಮಾಡಿ ಹಾಕುತ್ತಾರೆ. ಗಂಡ ಈ ವಿಷಯವನ್ನು ಗುಟ್ಟಾಗಿ ತನ್ನ ಸ್ನೇಹಿತರಿಗೆಲ್ಲಾ ಹೇಳಿದ. ತಗೊಳ್ಳಿ - ಕಂದಾಯ, ಪಿ.ಡಬ್ಲ್ಯು.ಡಿ. ಸಾರಿಗೆ, ತೂಕದ ಇಲಾಖೆ, ವಿದ್ಯುತ್ ನಿಗಮ-ಹೀಗೆ ಎಲ್ಲಾ ಇಲಾಖೆಗಳಲ್ಲಿ ದುಡಿಯುತ್ತಿರುವ ಗಂಡಸರು ಒಟ್ಟಾದರು. ಹೋಟೆಲಿನ ಬದಿಯಲ್ಲಿಯೇ ಶಾಮಿಯಾನ ಹಾಕಿ ಇಡ್ಲಿಪೂಜೆ ಪ್ರಾರಂಭಿಸಿದರು. ನಾಳೆ ಮೂವತ್ತನೆಯ ಮತ್ತು ಕೊನೆಯ ಪೂಜೆ. ಅಷ್ಟರಲ್ಲಿ ಎಲ್ಲರ ಹೆಂಡತಿಯರ ಮನಸ್ಸು ಹೂವಿನಂತಾಗುತ್ತದೆ - ಹೂ ಇಡ್ಲಿ ಸಿಗುತ್ತದೆ.

ನನ್ನ ದಿವ್ಯಜ್ಞಾನ ಇಲ್ಲಿಗೆ ಮುಗಿಯಿತು. ಹೋಟೆಲು ಹೊಕ್ಕ ಕರ್ಮಕ್ಕೆ ಇಡ್ಲಿ ತಿನ್ನಬೇಕೆಂದು ಮನಸ್ಸಾಯಿತು. ಮಾಣಿ ತಂದ. ಚಮಚದಲ್ಲಿ ತುಂಡು ಮಾಡಲು ಸಾಧ್ಯವಾಗದಷ್ಟು ಗಟ್ಟಿ ಇತ್ತು. ಇದೂ ಕಲ್ಲಿಡ್ಲಿಯೇ. ಮೆಲ್ಲನೆ ಹೋಟೆಲಿನ ಒಳಕೋಣೆಗೆ ತಿಂಡಿ ತಯಾರಿಸುವಲ್ಲಿ ಹೋದೆ. ''ಇಲ್ಲಿ ಇಡ್ಲಿ ಮಾಡುವವರು ಯಾರು?'' ಎಂದು ಕೇಳಿದೆ. ದೋಸೆ ಹೊಯ್ಯುತ್ತಿದ್ದ ನರಪೇತಲ ಒಂದು ಎದ್ದುಬಂತು.

''ಯಾಕ್ರೀ ಈ ರೀತಿ ಕಲ್ಲಿಡ್ಲಿ ತಯಾರು ಮಾಡ್ತೀರಿ?'' ಎಂದು ಕೇಳಿದೆ.

''ಅಯ್ಯೋಸ್ವಾಮಿ, ನನ್ನ ಹೆಂಡತಿಗೆ ಏಳು ಸಾವಿರದ ಕಾಂಜೀವರಮ್ ಸೀರೆ ಬೇಕಂತೆ; ಯಜಮಾನರ ಹೆಂಡತಿಗೆ ಮರ್ಸಿಡಿಸ್ ಕಾರು ಬೇಕಂತೆ. ಇವರ ಆಸೆ ತಿರಿಸಲು ನಮ್ಮಿಬ್ಬರಿಂದ ಸಾಧ್ಯವಿಲ್ಲ. ಹಾಗಾಗಿ ನಾವಿಬ್ಬರೂ ಕೂಡಿ, ಈ ರೀತಿಯ ಕಲ್ಲಿಡ್ಲಿ ಮಾಡಿ, ಅದಕ್ಕೆ ಪೂಜೆ ಮಾಡಿ, ಹೆಂಡಂದಿರ ಆಸೆ ತಣ್ಣಗಾಗುವಂತೆ ಪ್ರಯತ್ನಿಸುತ್ತಿದ್ದೇವೆ. ಕ್ಷಮಿಸಿ. ಹೊರಗೆ ಶಾಮಿಯಾದ ಮಧ್ಯದ ಪೀಠದಲ್ಲಿ ಹತ್ತಾರು ಇಡ್ಲಿಗಳುಂಟಲ್ಲಾ ಅದರಲ್ಲಿ ಒಂದು ನನ್ನ ಲೆಕ್ಕದ್ದು; ಒಂದು

ಯಜಮಾನರ ಲೆಕ್ಕದ್ದು'' ಎಂದು ದೋಸೆ ಕಾವಲಿಗೆ ಹಿಂತಿರುಗಿದ. ನಾನು ಹೊರಬಂದು ಒಂದು ಕಪ್ ಚಹಾ ಸುರಿದುಕೊಂಡು, ಬಸ್ ಬಳಿಗೆ ಬಂದೆ - ಅದರ ಮೊದಲೊಮ್ಮೆ ಶಾಮಿಯಾನದ ಒಳಗೆ ಇಣುಕಿದೆ. ಹತ್ತಾರು ಇಡ್ಲಿಗಳನ್ನು ಮಂಗಳೂರು ಮಲ್ಲಿಗೆ, ಉತ್ತರಕನ್ನಡದ ಅಬ್ಬಲಿಗೆ, ಮೈಸೂರಿನ ಸೇವಂತಿಗೆ - ಮುಂತಾದ ಹಲವಾರು ಹೂಗಳಿಂದ ಶೃಂಗರಿಸಿದ್ದರು. ಅಲ್ಲೇ ನಿಂತಿದ್ದ ಭಟ್ಟರೊಬ್ಬರು, ತನ್ನ ಮಗ್ಗುಲಲ್ಲಿದ್ದ ಬುಡ್ಡಿಯಿಂದ ಕಲ್ಲಿಡ್ಲಿಗಳನ್ನು ಹೊರತೆಗೆದು, ಕತ್ತಿಯಿಂದ ತುಂಡರಿಸಿಮ, ಮುಂದೆ ಬರುತ್ತಿದ್ದ ಕಲ್ಲಿಡ್ಲಿ ಶಾಪಿತರಿಗೆ ಪ್ರಸಾದವಾಗಿ ಕೊಡುತ್ತಿದ್ದರು.

★★★



ದಿನಾಗ್ಲೂ ಚೆನ್ನಾಗಿ ಪಾಠ ಓದಿದ್ರೆ ನಾನೂ ಸಲ್ಮಾನ್ ಖಾನ್ ತರಾ ಆಗ್ಬೋದೇನಮ್ಮಾ ?

ಕೊರಿಯರ್ ಪ್ರೋಡಿ

– ಕು.ಗೋ.

ಆಫೀಸಿಗೆ ಹೋಗಲು ಬಸ್ಸಿಗಾಗಿ ಕಾಯುತ್ತಿದ್ದೆ. ಯಮಾಹಾ ಮೋಟರ್‌ಸೈಕಲ್ ಬಹಳ ವೇಗವಾಗಿ ಬಂದು ನನ್ನ ಕಾಲ ಬುಡದಲ್ಲಿ ಗಕ್ಕನೆ ನಿಂತಿತು. ವಾಹನದ ಮೇಲೆ ಕುಳಿತಿದ್ದ ವ್ಯಕ್ತಿಯನ್ನು ಹೆಲ್ಮೆಟ್‌ನ ಅಡಿಯಲ್ಲಿ ನೋಡಿದೆ. ನಮ್ಮದೇ ಆಫೀಸಿನ ಪುಂಡಲೀಕ ಪಾಟೀಲರ ಮುಖ ಕಾಣಿಸಿತು. ಬಹುಶಃ ನನಗೆ ಲಿಫ್ಟ್ ಕೊಡಲು ನಿಲ್ಲಿಸಿರಬಹುದೆಂದು ಒಂದು ಸಣ್ಣ ನಗೆಬೀರಿ ಹಿಂದಿನ ಸೀಟಿನಲ್ಲಿ ಆಚೀಚೆ ಕಾಲು ಹಾಕಿ ಕುಳಿತೆ. 'ನಿಮಗೆ ಕುಳಿತುಕೊಳ್ಳಲಿಕ್ಕೆ ಯಾರು ಹೇಳಿದ್ದು?' ಎಂದರು ತಮ್ಮ ಗಡಸು ಧ್ವನಿಯಲ್ಲಿ. 'ಇಳೀತೇನೆ ಬಿಡಿ' ಎಂದೆ. ನನಗೆ ಇಳಿಯಲೂ ಅವಕಾಶ ಕೊಡದೆ ಮೋಟರ್‌ಸೈಕಲ್ ಸ್ಟಾರ್ಟ್ ಆಯಿತು. 'ಎಲ್ಲಿಗೆ ಆಫೀಸಿಗಾ?' ಎಂದರು 'ಹೌದು' ಎಂದೆ. 'ತಾಲ್ಲೂಕು ಆಫೀಸಿನಲ್ಲಿ ನನಗೆ ಹತ್ತು ನಿಮಿಷ ಕೆಲಸ ಇದೆ. ಸ್ವಲ್ಪ ಕಾಯಿರಿ. ಆಮೇಲೆ ಆಫೀಸಿಗೆ ಬಿಡುತ್ತೇನೆ' ಎಂದು ವಾಹನವನ್ನು ರಭಸದಿಂದ ಓಡಿಸಿ ತಾಲ್ಲೂಕು ಆಫೀಸಿನಲ್ಲಿ ನಿಲ್ಲಿಸಿ ನನ್ನನ್ನು ಹೊರಗೆ ಕಾಯಿಸಿ ಒಳಗೆ ಹೋದರು. ಎರಡು ಹತ್ತು ನಿಮಿಷಗಳಾದರೂ ವ್ಯಕ್ತಿ ಹೊರಗೆ ಬರುವ ಹಾಗೆ ಕಾಣಲಿಲ್ಲ. ನಡೆದುಕೊಂಡೇ ಹೋಗೋಣವೆಂದು ಹೊರಟು ಸ್ವಲ್ಪ ದೂರ ನಡೆದೆ. ಮೋಟರ್ ಸೈಕಲ್ ಬಂತು. 'ಕುಳಿತುಕೊಳ್ಳಿ' ಎಂದರು. ಆಫೀಸಿಗೆ ತೆಗೆದುಕೊಂಡು ಹೋಗಿ ಬಿಟ್ಟರು.

ಪು.ಪಾ.ರ ಬಗ್ಗೆ ಬರೆಯುವುದಾದರೆ ಪುಟಗಟ್ಟಲೆ ಬರೆಯಬಹುದು. ಹೇಳುವುದಾದರೆ ದಿನಗಟ್ಟಲೆ ಹೇಳಬಹುದು. ಒಂದು ವಿಚಿತ್ರ ಮನುಷ್ಯ ಅವರದ್ದೇ ಒಂದು ಕ್ರಮ. ಒಂದು ಧೋರಣೆ, ಮಾತಿನಲ್ಲಿ, ಚರ್ಚೆಯಲ್ಲಿ ಅವರು ಸೋಲುವವರಲ್ಲ. ಮಾತು ಖಾರ, ಒಳಗೆ ಮಿದು, ಅವರ ವೇಶ ಭೂಷಣ, ನಡೆನುಡಿ, ಕೆಲಸ ಕಾರ್ಯ ಎಲ್ಲವೂ ವಿಚಿತ್ರ, ಅದನ್ನು ಯಾರೂ ಅನುಕರಿಸಲು ಸಾಧ್ಯವಿಲ್ಲ. ಯಾವ ಘಳಿಗೆಯಲ್ಲಿ ಅವರು ಹೇಗೆ ಇರುತ್ತಾರೆಂದು ಹೇಳುವುದೂ ಕಷ್ಟ. ತಿನ್ನುವುದರಲ್ಲಿ ಬಕಾಸುರ, ಕೆಲಸದಲ್ಲಿ ಭೂತ ಮಾತು ಖಡಕ್ - ನೇರ: ತಲೆಯಲ್ಲಿ ಎರಡು ಶತಮಾನದ ಮುಂದಿನ ವಿಚಾರ ಕೂಡಾ ತುಂಬಿಹೋಗಿದೆ. ರಾತ್ರಿ ಮನೆಯಲ್ಲಿ ಪುಸ್ತಕ ಹಿಡಿದು ಕುಳಿತರೆ ಬೆಳಗಾದದ್ದೂ ಗೊತ್ತಾಗೋಲ್ಲ. ಅಷ್ಟೂ ಓದುವ ಚಟ. ಕೊಠಡಿ ಇಡೀ ಪುಸ್ತಕಗಳ ರಾಶಿ. ಒಪ್ಪ ಓರಣ ಕೇಳಲೇಬೇಡಿ. ಬೆಳಗ್ಗೆ ಎದ್ದವರೇ ಮುಖ ಕೂಡಾ ತೊಳೆಯದೆ ಆಫೀಸಿಗೆ ಬಂದು ಅಟೆಂಡೆನ್ಸ್ ರಿಜಿಸ್ಟರಿಗೆ ಸಹಿ ಮಾಡಿ ಅನಂತರ ಮನೆಗೆ ಹೋಗಿ ಸ್ನಾನ, ಜಪತಪ

ಪೂಜೆ ತಿಂಡಿ ಎಲ್ಲ ಮುಗಿಸಿ ಬರುವುದೂ ಇದೆ, ಕೆಲಸಕ್ಕೆ ಶುರು ಮಾಡಿದರೆ ತಲೆ ಎತ್ತದೆಯೇ ಫೈಲುಗಳ ಮಗುಚಾಟ. ರಾಶಿ ಪೇಪರ್ ಇದ್ದರೂ ನಿಮಿಷಾರ್ಧದಲ್ಲಿ ಮುಗಿಸಿಬಿಡುವ ಛಲ.

ಪಾಟೀಲರ ಅಂಗಿಗೆ ಎಲ್ಲಿ ಎಲ್ಲಿ ಎಷ್ಟು ಎಷ್ಟು ಕಿಸೆಗಳಿವೆ ಎಂದು ಹೇಳುವುದು ಕಷ್ಟ. ಬಿಳಿ ಪಂಚೆಯ ಕಚ್ಚೆ. ಬಿಳೀ ಜುಬ್ಬ, ತಲೆಯಲ್ಲಿ ಶಿಖೆ, ಹಣೆಯಲ್ಲಿ ನಾಮ ಮುದ್ರೆ, ಬಗಲಲ್ಲಿ ಚೀಲ, ಕಾಲಿಗೆ ಏರಿಸ್ ಶೂಸ್, ಒಮ್ಮೊಮ್ಮೆ ಈ ವೇಷಕ್ಕೆ ಕಂಠ ಲಂಗೋಟಿಯೂ ಇರುವುದುಂಟು. ಸಾಮು ಮಾಡಿದ ಹೆಚ್ಚು ಎತ್ತರವೂ ಅಲ್ಲದ ಕುಳ್ಳೂ ಅಲ್ಲದ ಶರೀರ. ಮುಖದ ಸ್ನಾಯುಗಳು ಒಂದೇ ನಮೂನೆ ಇರುವುದೇ ಇಲ್ಲ. ಭಾವ ಬದಲಾಗುತ್ತಾ ಇರುವ ಸ್ವಭಾವ. ತನ್ನದೇ ಮದುವೆಗೆ ಕೇವಲ ಅರ್ಧದಿನ ರಜೆ ತೆಗೆದುಕೊಂಡ ಮನುಷ್ಯ. ಕೋಪ ಜಾಸ್ತಿ ಇದ್ದಾಗ ಆಫೀಸಿನಲ್ಲೇ ಚಾಪೆ ಬಿಡಿಸಿ ಮಲಗಿದ ಮನುಷ್ಯ. 'ಪಾಟೀಲ್ ಮಾಮಾ ಇವತ್ತು ಕಾಫಿ ಕುಡಿಸಿ' ಎಂದರೆ ಅವರ ಕರಾರಿಗೆ ಒಪ್ಪಿದರೆ ಮಾತ್ರ ಕಾಫಿ ಅಂದರೆ ಅವರು ಕೊಡಿಸಿದಷ್ಟೂ ತಿನ್ನಬೇಕು, ಕುಡಿಯಬೇಕು. ಅವರಿಗೆ ಕಾಫಿ ಕುಡಿಸುವುದಾದರೂ 'ಒಂದು ಹೊಟ್ಟೆ ಕಾಫಿ' ಕುಡಿಸಬೇಕು. ಈ ಬಾಬಿನಲ್ಲಿ ಅವರನ್ನು ಸೋಲಿಸಿದವರಿಲ್ಲ. ಹೋಟೆಲಿಗೆ ಹೋದಾಗ ಅವರು ಕಾಫಿಗೆ ತಿಂಡಿಗೆ ಆರ್ಡರ್ ಕೊಡುವ ರೀತಿಯನ್ನು ನೋಡಿದರೆ ಹುಬ್ಬು ಮೇಲೇರುತ್ತದೆ. ಹತ್ತು ಇಡ್ಲಿಕೊಡಿ, ನಾಲ್ಕು ಮಸಾಲೆದೋಸೆ ಹೇಳಿ, ಮೂರು ಪ್ಲೇಟ್ ಗೋಳೀ ಬಜೆ, ಆರು ಬಾದಾಮಿ ಹಲ್ವ, ಮುಕ್ಕಾಲು ಲೀಟರ್ ಕಾಫಿ... ಹೀಗೆ ಇನ್‌ಬೈಟೂ ಕಾಫಿ ಕುಡಿದು ಬಿಲ್ಲು ಪಾಲುಮಾಡಿ ಕೊಡುವವರ ತರಹ ಅವರಲ್ಲ.

ಒಂದು ದಿನ ನನ್ನ ಮುಂದೆ ಎರಡು ಮೂರು ಜನ ಕುಳಿತು ಏನನ್ನೋ ಚರ್ಚಿಸುತ್ತಿದ್ದರು. ಪಾಟೀಲರೂ ನಮ್ಮೊಡನೆ ಮಾತಿಗೆ ಸೇರಿದರು ಅವರ ಅಂಗಿಯ ಒಳಕಿಸೆಯಿಂದ ಒಂದು ಪೊಟ್ಟಣ ತೆಗೆದು ಬಿಚ್ಚಿದರು. ಸುಮಾರು ಅರ್ಧ ಕಿಲೋ ಗೇರುಬೀಜ. ಒಂದೊಂದನ್ನೇ ಬಾಯಿಗೆಸೆದು ಅಕ್ಕಪಕ್ಕದವರಿಗೆ ಒಂದು ಬೀಜವನ್ನೂ ಕೊಡದೆ ಎಲ್ಲವನ್ನೂ ಒಬ್ಬರೇ ತಿಂದು ಖಾಲಿ ಲಕೋಟೆಯನ್ನು ಕಸದ ಬುಟ್ಟಿಗೆ ಹಾಕಿ ಜಾಗ ಖಾಲಿ ಮಾಡಿದರು. 'ಯಾರಿಗೂ ಕೊಡದೆ ಒಬ್ಬರೇ ತಿಂದಿರಲ್ಲಾ ಮಹರಾಯರೇ' ಎಂದರೆ 'ನೀವೂ ತಂದು ತಿನ್ನಿ, ಯಾರು ಬೇಡ ಎಂದರು' ಎಂದಾರು. ದೂರದೂರಿಂದ ಬಂದ ಒಬ್ಬ ಗ್ರಾಹಕರ ಕೆಲಸವನ್ನು ಅವರು ನಿರೀಕ್ಷಿಸಿದ್ದಕ್ಕಿಂತಲೂ ಬೇಗನೇ ಮಾಡಿಕೊಟ್ಟರು. ಆತ ಬಹುಶಃ ತಾಲ್ಲೂಕು ಆಫೀಸಿನ ವ್ಯವಹಾರದಲ್ಲಿ ಅನುಭವ ಪಡೆದವನಿರಬೇಕು. ಸ್ವಲ್ಪ ನೋಟುಗಳನ್ನು ಇವರತ್ತ ಚಾಚಿದ. ಇವರು ಕೂಡಲೇ ತನ್ನ

ಡ್ರಾಯರಿನಲ್ಲಿದ್ದ ಬೇರೆ ಯಾವುದಕ್ಕೋ ತರಿಸಿದ್ದ ಒಂದು ಸಾವಿರ ರೂಪಾಯಿ ಇದ್ದ ನೋಟಿನ ಕಟ್ಟನ್ನು ಆತನ ಮುಂದಿಟ್ಟರು. ಬೇಕಾದರೆ ತೆಗೆದುಕೊಂಡು ಹೋಗಿ ಎಂದರು. ಆತ ಕಂಗಾಲು. 'ನಮಗೆ ಕೆಲಸ ಮಾಡಿದ್ದಕ್ಕೆ ಸಂಬಳ ಸಿಗುತ್ತೆ, ನೀವು ಹೀಗೆಲ್ಲಾ ಕೊಡಲು ಹೋಗಬೇಡಿ' ಎಂದು ಬುದ್ಧಿ ಹೇಳಿ ಕಳಿಸಿದರು.

ತಂಬಾಕು, ಅದು ಯಾವುದೇ ರೂಪದಲ್ಲಿರಲಿ ಅದು ಪಾಟೀಲರಿಗೆ ಆಗುತ್ತಿರಲಿಲ್ಲ. ತಂಬಾಕಿನ ಭಕ್ತರು ಅವರ ಬಳಿ ಹೋಗಬೇಕಾದರೆ ಅದರ ವಾಸನಾರಹಿತರಾಗಿ ಹೋದರೆ ಮಾತ್ರ ಅವರೊಡನೆ ಮಾತನಾಡಿಯಾರು. ಆದರೆ ಅದನ್ನು ಉಪಯೋಗಿಸಬೇಡಿರೆಂದು ಉಪದೇಶ ಕೊಡುವವರಲ್ಲ. ಪಾಟೀಲರ ಅಂಗಿಗೆ ಕಿಸೆ ಒಂದು ಅಥವಾ ಎರಡು ಅಲ್ಲ ಎಂದು ಮೊದಲೇ ಹೇಳಿದ್ದೇನೆ ಈ ಕಿಸೆಗಳೂ ಖಾಲಿ ಕಿಸೆಗಳಲ್ಲ. ಒಂದೊಂದು ಕಿಸೆಯಲ್ಲಿ ಏನೇನೋ ವಸ್ತುಗಳು ಇಣಿಕಿ ನೋಡುತ್ತಿರುತ್ತವೆ. ಒಂದು ಚಿಲ್ಲರೆಗೆ, ಒಂದು ನೋಟಿನ ಕಟ್ಟಿಗೆ, ಒಂದು ಪುಸ್ತಕಗಳಿಗೆ, ಒಂದು ತಿಂಡಿ ತಿನಸುಗಳಿಗೆ, ಇನ್ನೊಂದು ಬೇರೆ ಬೇರೆ ಆಫೀಸಿನ ಕೆಲವು ರಿಕಾರ್ಡುಗಳಿಗೆ, ಪಾಸುಪುಸ್ತಕ, ರಿಜಿಸ್ಟ್ರೇಶನ್ ಪುಸ್ತಕ, ಚೆಕ್ ಪುಸ್ತಕ ಕೆಲವೊಮ್ಮೆ ಮನೆಗೆ ತೆಗೆದುಕೊಂಡು ಹೋಗಬೇಕಾದ ತೊಗರಿಬೇಳೆ, ಹೆಸರುಬೇಳೆಗಳ ಕಟ್ಟುಗಳು ಇರುವುದೂ ಉಂಟು. ಯಾವ ವಸ್ತು ಬೇಕಾದರು ಅವರ ಕಿಸೆಗೆ ಅವರ ಕೈ ಯಾಂತ್ರಿಕವಾಗಿ ಹೋಗುವುದಿದೆ. ಯಾವ ಪ್ರಶ್ನೆಗೂ ಅವರಿಂದ ಕ್ಷಿಪ್ರ ಉತ್ತರವಿರುತ್ತದೆ. ಯಾವ ಸಮಸ್ಯೆಗೂ ಒಂದಲ್ಲ ಒಂದು ನಿವಾರಣೋಪಾಯವೂ ಇದೆ. ಹೀಗಾಗಿ ಅಥವಾ ಹಾಗಾಗಿ ಅವರೊಡನೆ ಚರ್ಚಿಸುವವರು, ಸಲಹೆ ಕೇಳುವವರು, ಮನರಂಜನೆ ಪಡೆಯುವವರಿಗೇನೂ ಕೊರತೆ ಇಲ್ಲ.

ಮೊನ್ನೆ ಮೊನ್ನೆ ಒಂದು ದಿನ ಅವರ ಮೋಟರ್‌ಬೈಕ್‌ನಲ್ಲಿ ಒಂದು ಗೊನೆ ಬಾಳೆಕಾಯಿಯೂ ಇದ್ದದ್ದು ನನ್ನ ಕಣ್ಣಿಗೆ ಬಿತ್ತು. ಅದರಲ್ಲಿ ಒಂದು ಹಣಿಗೆ ಬಾಳೆಕಾಯಿ ಕೊಡುತ್ತೀರಾ ಎಂದು ಕೇಳಿದೆ. 'ಕೊಡೋಲ್ಲ. ಅದು ನನಗೆ ಬೇಕು ಅಂತ ತಂದದ್ದು. ಮಾರಾಟಕ್ಕೂ ಅಲ್ಲ ಎಲ್ಲರಿಗೆ ಹಂಚಲಿಕ್ಕೂ ಅಲ್ಲ ಮನೆಯಲ್ಲಿ ಪೋಡಿ (ಭಜಿ) ಮಾಡಲಿಕ್ಕೆ ತಂದದ್ದು' ಅಂದರು, 'ಹಾಗಾದರೆ ಪೋಡಿ ಮಾಡಿದ ಮೇಲೆಯೇ ಸ್ವಲ್ಪ ಕೊಡಿ' ಎಂದೆ. 'ಆಗಬಹುದು' ಎಂದು ಬಿರಬಿರನೆ ನಡೆದೇ ಬಿಟ್ಟರು.

ಈ ಪೋಡಿಯ ವಿಚಾರ ಒಂದೆರಡು ದಿನದಲ್ಲಿ ನಾನು ಮರೆತಿದ್ದೆ. ಮೂರನೆಯ ದಿನ ನನಗೊಂದು ಪಾರ್ಸೆಲ್ ಬಂತು. ಅದೂ ಕೊರಿಯರ್ ಸರ್ವಿಸ್‌ನಲ್ಲಿ. ಆ ಪಾರ್ಸೆಲ್ ಬಿಚ್ಚುವ ಸಮಯಕ್ಕೆ ಸರಿಯಾಗಿ ಪಾಟೀಲರು ನನ್ನ

ಬಳಿ ಬಂದರು. 'ನೀವು ಮೊನ್ನೆ ಕೇಳಿದ್ದಿರಿ ಅಲ್ಲವಾ, ನನ್ನ ಮಗಳು ಬೆಂಗಳೂರಿಗೆ ಹೋಗುವವಳಿದ್ದಳು. ಅವಳಿಗಾಗಿ ಪೋಡಿ ಮಾಡಿದ್ದು, ಅವಳು ಹೋಗುವಾಗ ಎಲ್ಲ ತೆಗೆದುಕೊಂಡು ಹೋದಳು, ನಿಮ್ಮ ನೆನಪಾದ್ದೇ ಆಮೇಲೆ. ಕೂಡಲೆ ಅವಳಿಗೆ ಫೋನ್ ಮಾಡಿ ಸ್ವಲ್ಪ ಪೋಡಿ ನಿಮ್ಮ ಅಡ್ರೆಸ್ಸಿಗೆ ಕೊರಿಯರ್‌ನಲ್ಲಿ ಕಳಿಸಲು ಹೇಳಿದ್ದೆ. ಈಗ ಬಂದಿರಬೇಕು ನೋಡಿ.'

ಹೌದು. ಕೊರಿಯರ್‌ನಲ್ಲಿ ಬಾಳೆಕಾಯಿಯ ಪೋಡಿ ಬೆಂಗಳೂರಿಂದ ಬಂದಿತ್ತು. ಕೊಟ್ಟ ಮಾತಿಗೆ ತಪ್ಪದ ಆ ಗೋಬ್ರಾಹ್ಮಣನ ಮೇಲೆ ಏನೋ ತುಂಬ ವಿಶ್ವಾಸ ಮೂಡಿ ಒಂದು ಸಣ್ಣ ನಗೆಯೂ ಬಂತು.

★★★

ಹನಿಗವನ

ಹಾವಳಿ

ಬೆಂಗಳೂರಿನ ಹಲವು
ಬಡಾವಣೆಗಳಲ್ಲಿ 'RUM' ಗಳ
ಹಾವಳಿ
ಕೇಳಿ
ಬೇಕಾದರೆ
ಮಲ್ಲೇಶ್ವ 'RUM'
ಶೇಷಾದ್ರಿಪು 'RUM'
ಕೋದಂಡರಾಮಪು 'RUM'
ಗವಿಪು 'RUM'
ಶ್ರೀರಾಮಪು 'RUM'

ರಮ್ಮು - ದಮ್ಮು

ನನ್ನವಳನ್ನೆದುರಿಸಲು
ನನಗೆ ಬೇಕು
ದಮ್ಮು
ಅದಕ್ಕೆ ಆಗಾಗ ಅಷ್ಟಿಷ್ಟು
ಇಳಿಸುತ್ತೇನೆ
ರಮ್ಮು



ಯಾಕೆ ಹೆದರ್ತೀಯಾ ಗುರೂ, ನಾನೇನು ಮಿಕ್ಕೋರ್ತರಾ
ಹಗಲು ದರೋಡೆ ಮಾಡ್ತಿಲ್ವಲ್ಲಾ

ಗುಗ್ಗರೋಪಖ್ಯಾನ

ಗುಗ್ಗರಿ ಅಂದ್ರೆ ಏನು ಅಂತ ಕೇಳಿದಿರಾ? ಅದು ಗೊತ್ತಿಲ್ವೇ, ಓಹೋ ಉಸಳಿ ಅಂತೀರಾ, ಹಾಂ, ಹಾಂ, ಅದೇ, ಕಡಲೆಕಾಳು, ಹೆಸರುಕಾಳು, ಅವರೆಕಾಳು, ಟಾಣಿಕಾಳು ಇವೆಲ್ಲ ಉಸಿಳಿ ಮಾಡೋ ಕಾಳುಗಳೇ ಹೌದು, ಆದರೆ ನಾನು ಹೇಳಹೊರಟಿರುವುದು ಕಡಲೆಕಾಳು ಗುಗ್ಗರಿಯ ಪುರಾಣ ಅರ್ಥಾತ್ ನಮ್ಮ ಶಾರದಕ್ಕ ಶಾಲೆಗೆ ತಂದು ಮಧ್ಯಾಹ್ನ ಊಟದ ಸಮಯದಲ್ಲಿ ತನ್ನ ಸಹೋದ್ಯೋಗಿಗಳಿಗೆಲ್ಲಾ ಹಂಚಿದಾಗ ಅವರೆಲ್ಲರ ಉವಾಚವೇ ಗುಗ್ಗರೋಪಖ್ಯಾನ.

ತಮ್ಮ ತಮ್ಮ ದೊನ್ನೆಗಳಿಂದ ಎರಡೆರಡೇ ಕಾಳು ಬಾಯಿಗೆ ಹಾಕಿಕೊಳ್ಳುತ್ತಿರುವ ಗೆಳತಿಯರನ್ನು ಕಂಡು ಶಾರದಕ್ಕ ಕೇಳಿದರು ಯಾಕ್ರೇ ಹಾಗೆ ಎರಡೆರಡೇ ಕಾಳು ತಿಂತಿದಿರ ಹುರಿಗಾಳು ತಿಂದಂತೆ, ಚೆನ್ನಾಗಿಲ್ವೇ? ಖಾರಾನೇ?

ಹೂಂ, ನಮ್ಮ ಶಾರದಕ್ಕನ ಬಗ್ಗೆ ಹೇಳಲೇ ಇಲ್ಲ ಅಲ್ವೇ, ಅವರು ನಮ್ಮ ಸಹೋದ್ಯೋಗಿ, ಅವರು ನಮ್ಮೆಲ್ಲರಿಗಿಂತ ಹಿರಿಯರಾದುದರಿಂದ, ಉಳಿದವರನ್ನು ಕರೆದಂತೆ 'ಮಿಸ್' 'ಮೇಡಂ' ಎಂದು ಕರೆಯದೆ ಶಾರದಕ್ಕ ಅಂತ ಕರೀತೀವಿ. ಅವರೂ ಅಷ್ಟೆ. ಒಡಹುಟ್ಟಿದವರಂತೆ ಕಷ್ಟಸುಖ ಹಂಚಿಕೊಂಡು ತಮ್ಮ ಅನುಭವಾಮೃತದ ಸಲಹೆಗಳನ್ನು ಕೊಡ್ತಿರ್ತಾರೆ.

ಹೋ, ವಿಷಯ ಎಲ್ಲಿಗೋ ಹೋಯ್ತು, ಹಾಂ, ಅದೇ, ಅವರು ಆ ರೀತಿ ಪ್ರಶ್ನೆ ಕೇಳ್ತಾ ಇದ್ದಂತೆಯೇ ಒಬ್ಬೊಬ್ಬರೂ ಕೈ ಬಾಯಿ ತಿರುಗಿಸುತ್ತ ಶುರು ಮಾಡಿದರು ನೋಡಿ.

ಮಂಜುಳ ಮಧುರ ಧ್ವನಿ ಗುಗ್ಗರಿ ತಿಂದು ಗೊಗ್ಗರಾಗಿತ್ತು, ಅರ್ಥಾತ್ ಕಾರ ತಿಂದು ಕಂಠ ತುಂಬಿ ಬಂದಿತ್ತು.

ಚೆನ್ನಾಗಿದೇ ಕಣ್ರೇ, ಇನ್ನು ಸ್ವಲ್ಪ ಹಾಕಿ, ನಂಗೆ ಹಸಿ ಮೆಣಸು ಕಂಡ್ರೆ ಕಣ್ಣು ತಿರುಗಿದಂತಾಗುತ್ತೆ, ಅದಕ್ಕೆ ನಾನು ಅಡಿಗೆಗೆ ಅದನ್ನು ಉಪಯೋಗಿಸುವುದೇ ಇಲ್ಲ. ಕಾಯಿ, ಕೊತ್ತಂಬರಿ ಸೊಪ್ಪು, ಜೀರಿಗೆ ಎಲ್ಲ ಹಾಕಿ ಚೆನ್ನಾಗಿ ಮಾಡಿದೀರ, ಆದರೆ.... ಮುಂದೆ ಮಾತನಾಡಲಾಗದೆ ನೀರು ಕುಡಿದಳು.

ಎರಡು ಮೂರು ಸಲ ದೊನ್ನೆ ತುಂಬಿಸಿಕೊಂಡು ಮುಕ್ಕುತ್ತಿದ್ದ ಮಧುರ ಕಣ್ಣು ಮೇಲೆ ಮಾಡಿ ಹಾಗೇ ಕುಳಿತಾಗ ಗಾ ರಿಯಾಯ್ತು 'ಏನೇ ಏನಾಯ್ತು?' ಎಂದು ಎಲ್ಲಾರೂ ಒಟ್ಟಾಗಿ ಕೇಳಿದಾಗ ಹೊರಬಂದ ಉವಾಚ ''ಗುಂಡು ಹಾಕಿದೋರಿಗೆ ಅದರ ಮಜಾ ಗೊತ್ತಾಗುತ್ತೆ'' ಎಂದು ನಮ್ಮವರು ಯಾವಾಗಲೂ ಹೇಳ್ತಿರ್ತಾರೆ, ಬಹುಶಃ ಹೀಗೇ ಇರುತ್ತೇನೋ ಅಂತ ಅಂದುಕೊಳ್ತಿದೀನಿ ಭಾವನಾಪರವಶಳಾಗಿ ಹೇಳಿದಳು.

ಗುಂಡು ಹಾಕಿದಾಗ ಮಧ್ಯೆ ಮಧ್ಯೆ ತಿನ್ನಲು ಹೀಗೆ ಖಾರವಾಗಿ ಇರಬೇಕೆಂತೆ ಕಣ್ರೀ, ಮಜವಾಗಿರುತ್ತಂತೆ, ನಮ್ಮ ಪಕ್ಕದ ಮನೆ ಪೋಲೀಸ್ ಆಫೀಸರ್ ಹೇಳ್ತಿರ್ತಾರೆ ವೀಣಾ ಹೇಳಿದಳು.

''ಈಗ ಸಿಹಿ ಹಂಚಿಕೆ ಕಾರ್ಯಕ್ರಮವಿದೆ ಅಂತ ಯಾರಾದರೂ ಘೋಷಿಸಿದರೆ ಚೆನ್ನಾಗಿರುತ್ತೆ ಅಲ್ವಾ'' ಹೊಸದಾಗಿ ಕೆಲಸಕ್ಕೆ ಸೇರಿದ ಬಳ್ಳಿಯಂತೆ ಬಳುಕುವ ಭಾವನ ಮೆಲ್ಲನೆ ತನ್ನ ಆಸೆ ವ್ಯಕ್ತಪಡಿಸಿದಳು.

''ಚಾಕಲೇಟ್ ಹಂಚಿಕೆ ನನ್ನಿಂದ'' ಎಂದು ಎಲ್ಲರಿಗೂ ಚಾಕಲೇಟ್ ಹಂಚಿದ ಛಾಯಾ ತಾನು ಮಾತ್ರ ದೊನ್ನೆ ತುಂಬ ಗುಗ್ಗರಿ ತುಂಬಿಕೊಂಡಳು.

''ನೀರು ಕೊಡೇ, ಆಗಲೇ ಕೇಳಿದೆನಲ್ಲಾ'' ಸರಳಾ ಕಣ್ಣೀರು ಸುರಿಸುತ್ತ ಕೇಳಿದಳು. ಸರೋಜ ಗಾಬರಿಯಿಂದ, ''ಇದೇನೇ ಸರಳಾ, ಈಗತಾನೇ ಎರಡು ಲೋಟ ನೀರು ಕುಡಿದೆಯಲ್ಲೇ, ಏನಾಗಿದೆ ನಿಂಗೆ?''

''ಅಯ್ಯೋ ಹೌದಾ, ಕುಡಿದರೂ ತಿಳಿಯಲಿಲ್ಲ ನೋಡು!'' ಆಶ್ಚರ್ಯದಿಂದ ಕೇಳಿದ ಸರಳ 'ಅಲ್ವೇ ಸರೋಜ, ಖಾರ ಆದರೂ ಎಷ್ಟು ಚೆನ್ನಾಗಿದೆ ಅಲ್ವಾ' ಎಂದು ಉದ್ಗಾರ ತೆಗೆದಳು.

ಅಬ್ಬಬ್ಬ ಈವತ್ತು ಕುಡಿಯಲು ತಂದಿಟ್ಟ ಕೊಡ ನೀರು ಮುಗಿದೇ ಹೋಯ್ತು, ಕೆಂಪಮ್ಮನ್ನ ಕರೀರೇ ಬಿಕ್ಕಳಿಸುತ್ತ ಭಾವನಾ ಮೇಲೆ ನೋಡಿದಳು.

''ರೆಸಿಪಿ ಬರೆದು ಟಿ.ವಿ.ಗೆ ಕಳಿಸ್ರೀ ಶಾರದಕ್ಕ ನೋಡ್ತಾ ನೋಡ್ತಾ, ಆ ಖಾರ ಅನುಭವಿಸ್ತಾ ನೋಡುವವರ ಕಣ್ಣಲ್ಲಿ ನೀರು ಬರಿಸುವ ಜಾದೂ ಶಕ್ತಿ ನಿಮ್ಮಲ್ಲಿದೆ'' ಮಾತನಾಡದೆ ಮೆಲ್ಲನೆ ಕಾಳು ಮುಕ್ಕುತ್ತಿದ್ದ ಮೌನಗೌರಿ ಎಂದೇ ನಾವು ಕರೆಯುವ ಮೀನಾಕ್ಷಿ ಮೆಲ್ಲನೆ ತನ್ನ ಟೀಕಾಸ್ತ್ರ ಎಸೆದಳು.

ಗುಗ್ಗರಿಯು ರುಚಿಯಾಗಿದೆ, ಮತ್ತೆ ಮತ್ತಷ್ಟು ತಿನ್ನುವ ಆಸೆಯೂ ಆಗುತ್ತಿದೆ, ಕಾರವನ್ನು ಮೆಟ್ಟಿ ತಿನ್ನುವಂತಿದೆ, ಅಬ್ಬಬ್ಬ ಶಾಂತ ಸಾವೇರಿರಾಗದಲ್ಲಿ ಉಪಸಂಹಾರ ಮಾಡಿದಳು.

ಕಾಫಿ ಸಮಾರಾಧನೆಯಾಗದಿದ್ದರೆ ಗುಗ್ಗರೋಪಖ್ಯಾನ ಮುಕ್ತಾಯ ಹಂತ ತಲುಪುವುದಿಲ್ಲ ಮಂಗಳ ಹಾಡಬೇಕೆಂದರೆ ಸುರಾಪಾನವಾಗಲೇಬೇಕು ಎಂದು ವೀಣಾ ತನ್ನ ಎಂದಿನ ವಾಣಿಯನ್ನು ಮೊಳಗಿಸಿದಾಗ ಎಲ್ಲರೂ ಹೌದು ಹೌದು ಎಂದೆವು.

ಡಬ್ಬಿ ತೊಳೆಯಲು ಬಂದ ಕೆಂಪಮ್ಮ ಖಾಲಿ ಪಾತ್ರೆ ನೋಡಿ ಏನ್ರವ್ವಾ ಖಾರ, ಖಾರ ಅಂತ ಹೇಳ್ತಾನೇ ಎಲ್ಲಾ ಖಾಲಿ ಮಾಡಿಬಿಟ್ಟಿದ್ದೀರ ಎಂದಾಗ ಎಲ್ಲ ಮುಖ ಮುಖ ನೋಡಿಕೊಂಡೆವು.

(ಲೇಖಕರ ಹೆಸರಿದ್ದ ಕವರಿಂಗ್ ಲೆಟರ್ ತಪ್ಪಿಹೋಗಿದೆ. ಲೇಖಕರು ನಮಗೆ ಬರೆದು ತಿಳಿಸಿದರೆ ಮುಂದಿನ ಸಂಚಿಕೆಯಲ್ಲಿ ಇದನ್ನು ಸರಿಪಡಿಸಲಾಗುವುದು ಲೇಖಕರಿಗೆ ನಮ್ಮ ಕ್ಷಮಾಪಣೆಗಳು. - ಸಂಪಾದಕ)

ಪಟಲೋಪತಿ

- ಆನಂದ

ನನ್ನ ಕೈ ನೋವಿನ ವಿಷಯ ನಿಮಗೆ ಹೇಳಲೇ ಇಲ್ಲ ಅಲ್ಲವೆ? ಅದಕ್ಕೂ ಮೊದಲು ನಿಮಗೆ ಬೆನ್ನು ನೋವಿನ ವಿಷಯ ಹೇಳಲೇಬೇಕು. ಎರಡಕ್ಕೂ ಸಂಬಂಧ ಇದೆ ಎಂದು ನನಗೆ ಗೊತ್ತಾಗಿದ್ದು ಮೂಳೆ ತಜ್ಞರನ್ನು ಭೇಟಿ ಮಾಡಿದಾಗ ಅವರಿಗೆ ನನ್ನ ಕೈ ನೋವಿನ ವಿಷಯ ವಿವರಿಸಿದೆ. ಧಾರವಾಡಿಗರ ಭಾಷೆಯಲ್ಲಾದರೆ ಅದು ಭಯಂಕರ ತ್ರಾಸ ಕೊಡಲಿಕ್ಕೆ ಹತ್ತಿತ್ತು. ಮೊಣಕೈ ಬಳಿ ಒಂದೆರಡು ಕೇಂದ್ರಗಳನ್ನೂ ಗುರುತಿಸಿದ್ದೆ. ಅಲ್ಲಿ density of ನೋವು ಹೆಚ್ಚಿತ್ತು - ತಿರುಪತಿಯಲ್ಲಿ density of venkateshwara ಕೇಂದ್ರೀಕೃತಗೊಂಡಂತೆ.

ಆದರೆ ಮೂಳೆ ತಜ್ಞರು ನನ್ನ ಬೆನ್ನನ್ನು ತಡಕಾಡುತ್ತಿದ್ದರು. ಇವರು ತ್ರಾವಿಟೇಷನ್ ಶುಲ್ಕದ ವೈದ್ಯರಿರಬಹುದೇನೋ ಎಂಬ ಅನುಮಾನ ಬಂದಿತು. 'ಸಾರ್, ನೋವಿರುವುದು ಇಲ್ಲಿ ಮೊಣಕೈ ಬಳಿ ನೋಡಿ' ಎಂದೆ.

'ಇರಬಹುದು ಆದರೆ ಅದರ ಹೆಡ್ ಆಫೀಸ್ ಇರುವುದು ಇಲ್ಲಿ' ಎಂದು ಬೆನ್ನು ಸವರತೊಡಗಿದರು. ಆಹಾ! Lady doctor ಆಗಿದ್ದರೆ ಇನ್ನಷ್ಟು ಹಿತವಾಗಿರುತ್ತಿತ್ತು ಎನಿಸಿತು.

'ಕೈ ಎತ್ತುವಿರಾ?'

'ಯಾವುದಕ್ಕೆ ಸಾರ್? ಕನ್ನಡಕ್ಕೆ? ಖಾಸಗೀಕರಣಕ್ಕೆ? ಕಬ್ಬನ್‌ಪಾರ್ಕ್‌ಗೆ? ಯಾವುದಕ್ಕೆ ಸಾರ್?' ಎಂದೆ.

'ಸುಮ್ಮನೆ ಕೈ ಎತ್ತಿ' ಎಂದರು.

ಎತ್ತಿದೆ.

'ಇಳಿಸಿ' ಎಂದರು

'ಏನನ್ನು? ತೂಕವನ್ನೇ?' ಎಂದು ಕೇಳಿದೆ.

'ಈಗ ಕೈ ಇಳಿಸಿ' ಎಂದರು. ಇಳಿಸಿದೆ.

ಮುಂದೆ ಚಾಚಿಸಿದರು. ಹಿಂದೆ ಬಗ್ಗಿಸಿದರು. ಎಲ್ಲಾ ಮಾಡಿದೆ ಕೈ ನೋವಿದ್ದರೂ ಸಹ. ಆದರೆ ತೋಳಿಗೆ ಏನೂ extra ತೊಂದರೆ ಆಗಲಿಲ್ಲ. ವೈದ್ಯರಿಗೆ ತುಸು ನಿರಾಶೆ ಆದಂತೆ ತೋರಿತು. ಏಕೆಂದರೆ ಬೆನ್ನಲ್ಲಿ ಹೆಡ್ ಆಫೀಸ್ ಮಾಡಿಕೊಂಡಿದ್ದ ನೋವು ಮೊಣಕೈ ಬಳಿ ಮಾತ್ರ ತನ್ನ ಶಾಖೆಯನ್ನು ತೆರೆದಿದ್ದು ಅವರಿಗೆ ಅರ್ಥವಾಗಿರಲಿಲ್ಲ. ಅವರು ಆರ್ಥೋಪಿಡಿಕ್ಸ್ ಪ್ರಕಾರ ಈ ಕೈ ವ್ಯಾಯಾಮ ಸಾಧ್ಯವಾಗಬಾರದಿತ್ತು. ಆದರೆ ನಾನು ಮಾಡಿದ್ದೆ. ಇದರಿಂದಾಗಿ ನನ್ನ ನೋವಿಗೇನು ಕಾರಣ ಎಂದವರಿಗೆ ತಿಳಿಯಲಿಲ್ಲ. ನೋವು ಉಪಶಮನ

ಮಾತ್ರೆಗಳನ್ನು ಕೊಟ್ಟು ಒಂದು ವಾರ ತೊಗೊಂಡು ನೋಡಿ. ಇನ್ನೂ ನೋವಿದ್ದರೆ ಒಂದು ಎಕ್ಸ್-ರೆ ತೆಗೆಯೋಣ ಎಂದು ನನ್ನನ್ನು ಸಾಗಿ ಹಾಕಿದರು.

ಮಾತ್ರೆ ಮೊದಲೆರಡು ದಿನ ಕೆಲಸ ಮಾಡಿದಂತೆ ತೋರಿತು. ಆದರೆ ಅದೇಕೋ ಅದರ ಉತ್ಸಾಹ ಝುರ್ರನೆ ಇಳಿದಂತಾಗಿ ನೋವು ಮತ್ತೆ ಕಾಡತೊಡಗಿತು. ಅಲ್ಲಿಗೆ ಅಲೋಪತಿ ಸಾಕೆನಿಸಿತು.

ಮನೆಯಲ್ಲಿ ತಾಯಿ, ಹೆಂಡತಿ ಚಿಕಿತ್ಸೆ ಮಾಡಿದರು.

ತಾಯಿ ನೋವಾದ ಜಾಗದಲ್ಲಿ ತಣ್ಣೀರು ಬಟ್ಟೆ ಕಟ್ಟಿದರೆ ಹೆಂಡತಿ ಅದರ ಹೆಡ್ ಆಫೀಸಿನಲ್ಲಿ - ಅಂದರೆ ಬೆನ್ನು - ಹುರಿದ ಉಪ್ಪಿನ ಶಾಖ ನೀಡಿದಳು. ಎರಡೂ ನಿವಾರಿಸಿದ ಭ್ರಮೆ ಮೂಡಿಸಿತು. ಇದನ್ನು ಬೇಕಾದರೆ ನ್ಯಾಚುರೋಪತಿ ಎನ್ನಿ ಬೇಕಿದ್ದರೆ.

ಆಯುರ್ವೇದದ ಮೊರೆ ಹೊಕ್ಕೆ. ಆ ವೈದ್ಯರು ಯುವರಾಜ್ ಗುಗ್ಗಲು ಪ್ರಿಸ್‌ಕ್ರೈಬ್ ಮಾಡಿದರು. ಏನು ಹಾಗೆಂದರೆ ಎಂದಿರಾ? ಅದೊಂದು ಮಾತ್ರೆ. ಶ್ರೀಕರ ಕಸ್ತೂರಿ ಮಾತ್ರೆ ಗೊತ್ತಲ್ಲವೆ? ಅದನ್ನು ಭೂತಗನ್ನಡಿಯಲ್ಲಿ ಹಿಗ್ಗಿಸಿ ನೋಡಿದರೆ ಎಷ್ಟು ದಪ್ಪ ಕಾಣುತ್ತದೊ ಆ ಗಾತ್ರ ಮಾತ್ರೆ ದಿನಕ್ಕೊಂದು ಅರ್ಧಲೋಟ ಹಾಲಿನಲ್ಲಿ, ಅದೂ ಆಯಿತು.

ಜೊತೆಗೆ, ಮಹಾನಾರಾಯಣ ತೈಲ. ಅದನ್ನು ಹಚ್ಚಿ 10 ನಿಮಿಷದ ನಂತರ ಸ್ನಾನ ಮಾಡಿ ಎಂದಿದ್ದರು. ಹತ್ತೇ ನಿಮಿಷ ಸಾಕೆ ಪರಿಣಾಮಕಾರಿಯಾಗಲು ಎಂಬ ಸಂದೇಹ ನನ್ನದು. ಆದರೂ ಹಾಗೇ ಮಾಡಿದೆ.

ಯು.ಗು. ಆಗಲೀ ಮ.ನಾ. ತೈ. ಆಗಲೀ ಏನೂ ಸಹಾಯ ಮಾಡಲಿಲ್ಲ. ನೋವು ಮುಂದುವರೆಯಿತು. ಕೆಲಸ ತಪ್ಪಿಸಿಕೊಳ್ಳಲು ಈ ನಾಟಕ ಎಂದರು ಕೆಲವು ಸಂದೇಹವಾದಿ ಸಹೋದ್ಯೋಗಿಗಳು. ನನ್ನ ನೋಯುತ್ತಿದ್ದ ಬೆನ್ನ ಹಿಂದೆ.

ನೋವಿನಲ್ಲೂ ದೈನಂದಿನ ಕೆಲಸಗಳು ಮುಂದುವರೆದರು. ಈ ಮಧ್ಯೆ ಗೋಸಾಯಿಘಾಟ್‌ಗೆ ಪಿಕ್‌ನಿಕ್‌ಗೆ ಹೋದೆವು. ಅಲ್ಲಿನ ನೆರಳಿನಲ್ಲಿ ಕುಳಿತಿದ್ದಾಗ ನನ್ನ ಮೈದುನನ ಮಗ ಅಂಕಲ್, ಷಟಲ್ ಆಡೋಣ ಬನ್ನಿ ಎಂದು ಕರೆದ (ಸವಾಲೆಸೆದ?)

ಏನೆನಿಸಿತೋ ಏನೋ ಷಟಲ್ ಹಿಡಿದೇಬಿಟ್ಟೆ. ನಾನು ಪ್ರಕಾಶ್ ಪಡುಕೋಣೆ ಎಂದೇ ಭಾವಿಸಿಕೊಂಡು ಎದುರಾಳಿ ಈರುಳ್ಳಿ ಮಾರಾಟಗಾರ ಎಂದು ತೀರ್ಮಾನಿಸಿ ಬ್ಯಾಟ್ ತಿರುಗಿಸಿ, ಬಾರಿಸಿದೆ. ಕೈ ಸಲೀಸಾಗಿ ತಿರುಗಿತು.

10- 15 ನಿಮಿಷದ ನಂತರ ಆಟ ನಿಲ್ಲಿಸಿದೆ.

ಅರೆ! ಕೈನೋವು ಮಾಯ! ಥೇಟ್ ದೂರದರ್ಶನದ ಜಾಹೀರಾತಿನಲ್ಲಿ ಆದಂತೆ. ಅಲ್ಲಿ 10 ಸೆಕೆಂಡ್‌ನಲ್ಲಿ ವಾಸಿಯಾದರೆ ನನ್ನದು 10 ನಿಮಿಷದಲ್ಲಿ ಆಗಿತ್ತು. ಇದನ್ನೇ ನಾನು ಷಟಲೋಪತಿ ಎಂದು ಕರೆಯುತ್ತಿದ್ದೇನೆ.

ಹಾಸ್ಯಬ್ರಹ್ಮ, ಅಪರಂಜಿ ವೇದಿಕೆ ಸಾದರಪಡಿಸುವ

ಹಾಸ್ಯೋತ್ಸವ - 98

ರಾಶಿ-ರತ್ನ ಸಂಸ್ಮರಣೆ

ದಿನಾಂಕ	-	25-12-98 ಶುಕ್ರವಾರ
ಸಮಯ	-	ಬೆಳಿಗ್ಗೆ 10.30 ರಿಂದ 5.30ರ ವರೆಗೆ
ಉದ್ಘಾಟನೆ	-	ಲೇಖಕಿ ಶ್ರೀಮತಿ ಸುಧಾ ಮೂರ್ತಿ ಅವರಿಂದ
ರಾಶಿ ರತ್ನ ಸ್ಮರಣೆ	-	ಪ್ರೊ॥ ಎಸ್.ಕೆ. ರಾಮಚಂದ್ರರಾವ್ ಡಾ॥ ನರಹಳ್ಳಿ ಬಾಲಸುಬ್ರಮಣ್ಯ ಶ್ರೀ ಬಿ.ವಿ. ವೈಕುಂಟರಾಜು ಶ್ರೀ ಎಸ್.ಬಿ. ವೈದ್ಯ
ಚಿಗ್ಗುರ ರತ್ನ	-	ಶ್ರೀವಾಣಿವಿದ್ಯಾಕೇಂದ್ರ (ರಾಜಾಜಿನಗರ) ಪುಟಾಣಿಗಳಿಂದ
ರತ್ನನ ಪದಗಳು	-	ಶ್ರೀ ರಾಜು ಅನಂತಸ್ವಾಮಿ ಶ್ರೀ ಯಶವಂತ ಹಳಬಂಡಿ ಶ್ರೀ ಎಚ್.ಎಸ್. ಲಕ್ಷ್ಮಿನಾರಾಯಣಭಟ್ಟ ಶ್ರೀಶೈಲನ್
ರಾಶಿ ಅಣಕವಾಡು ಹಾಗು ಪ್ರಹಸನಗಳು	-	ಗಾನ ವಿನೋದಿನಿ ತಂಡ
ಹಾರ್ಮೋನಿಯಂ ಹಗರಣವು	-	ಕಾವ್ಯವಾಚನ : ಕಡಬ ಸುಬ್ರಹ್ಮಣ್ಯ ವ್ಯಾಖ್ಯಾನ : ಅ.ರಾ. ಮಿತ್ರ
ಕಂಬ್ಳಿಸೇವೆ	-	ಶ್ರೀ ಚೆನ್ನಕೇಶವಮೂರ್ತಿ ತಂಡ

ಉಸ್ತುವಾರಿ - ಪ್ರೊ॥ ಅ.ರಾ. ಮಿತ್ರ

ಸ್ಥಳ: ಹೆಚ್.ಎನ್. ಕಲಾಕ್ಷೇತ್ರ, ಜಯನಗರ, ಬೆಂಗಳೂರು.

ಹೀಗೊಂದು ಕ್ಲಬ್

- ಇಸ್ಮೈಯಲ್

ಸೆನ್ಸಿಬಿಲ್ ಆಗಿ ಏನು ಸಾಧಿಸಲಾಗದಿದ್ದರೆ ನಾನ್‌ಸೆನ್ಸಿಬಲ್ ಆಗಿ ಅಂದ್ರೆ ನಾನ್‌ಸೆನ್ಸ್ ಕ್ಲಬ್‌ನ ಮೂಲಕ ಏಕೆ ಸಾಧಿಸಬಾರ್ದು? ಎಂಬ ಹಠದಿಂದ ತಾನು ಹೇಳಬೇಕಾದುದ್ದನ್ನು ತನ್ನದೇ ವಿನೂತನ ರೀತಿಯಿಂದ ಹೇಳ್ತಾರೆ ಜಸ್ಪಾಲ್‌ಭಟ್ಟಿ.

ರಾಷ್ಟ್ರಾಧ್ಯಕ್ಷರಿಗೆ ಪತ್ರ ಬರೆದು ತಮಗೆ ಭದ್ರತೆ ಒದಗಿಸಬೇಕೆಂದು ಮನವಿ ಮಾಡಿದ್ದಾರೆ. ಅವರು ಕೊಡುವ ಕಾರಣ ತಮ್ಮ ಮನೆಯಲ್ಲಿ ನೀರುಳ್ಳಿ ದಾಸ್ತಾನೂ ಮಾಡಿದ್ದಾರೆ. ಹೀಗೆ ನಾನ್‌ಸೆನ್ಸ್ ಕ್ಲಬ್‌ನ ಅನೇಕ ಪ್ರಯೋಗಗಳಾಗಿದೆ. ಪೆಟ್ರೋಲ್ ಬೆಲೆ ಜಾಸ್ತಿಯಾದಾಗ ಬೀದಿಯಲ್ಲಿ, ಬಸ್‌ಸ್ಟಾಂಡ್‌ಗಳಲ್ಲಿ ಆಟೋಸ್ಟಾಂಡಿನಲ್ಲಿ ಎಲ್ಲಾ ರಂಪ. ದೇಶದ ಆಡಳಿತವನ್ನು ರಾಜಕಾರಣಿಗಳನ್ನು ಬಾಯಿಗೆ ಬಂದ ಹಾಗೆ ಬಾಯಿತುಂಬ ಬೈದು ನೆಮ್ಮದಿ ಪಡೆದು ಗಂಟಲು ಒಣಗಿಸಿಕೊಳ್ಳುವುದು ಪ್ರಜಾಜನ. ಆದರೆ ಜಸ್ಪಾಲ್ ರಸ್ತೆಗಿಳಿದು ಪೆಟ್ರೋಲ್ ಬೆಲೆ ಏರಿಕೆ ಆದಾಗ ಅದರ ಗುಣಗಾನಮಾಡಿ ಬೆಲೆ ಏರಿಕೆಯ ಅನುಕೂಲಗಳ ಬಗ್ಗೆ ಭಾಷಣ ಮಾಡ್ತಾರೆ. ಅಪಘಾತಗಳನ್ನು ಕಮ್ಮಿಮಾಡುವ ಕ್ರೈಮ್‌ರೇಟ್ ಕಮ್ಮಿ ಮಾಡುವುದರ ಬಗ್ಗೆ ತಿಳುವಳಿಕೆ ಕೊಡ್ತಾರೆ.

ಸೀಮೆಯಣ್ಣೆ ಸುರಿದು ಸೊಸೆ ಸುಡೊ ಅತ್ತೆಯವರಿಗೆ ಅಭಿನಂದನೆ ಮಾಡ್ತಾರೆ ಜಸ್ಪಾಲ್. ಕಾರಣ ಭಾರತ ದೇಶವನ್ನು ವಿಶ್ವವಿಖ್ಯಾತ ಮಾಡಿದ ಏಕೈಕ ಕಾರ್ಯವೊಂದರ ಸೃಷ್ಟಿಕರ್ತ ಭಾರತವಂತೆ ಈ ನಿಟ್ಟಿನಲ್ಲಿ. ಮಕ್ಕಳ ಸ್ಕೂಲಿನ ಬ್ಯಾಗನ ಬಾರದ ಬಗ್ಗೆ ತಮ್ಮ ನಿಲುವನ್ನು ತೋರಿಸಲು ನಾನ್‌ಸೆನ್ಸ್ ಕ್ಲಬ್ ಒಂದು ರಥೋತ್ಸವ ಏರ್ಪಡಿಸಿತು. ಅದರಲ್ಲಿ ರಥದ ಮೇಲೆ ಸ್ಕೂಲ್ ಬ್ಯಾಗ್ ಇಟ್ಟು ಬೃಹತ್ ಮೆರವಣಿಗೆ ನಡೆಸಿದರು. ಆ ರಥವನ್ನು ಅನೇಕ ಜನರು ಎಳೆದರು.

ಸಿನಿಮಾಮಂದಿರದಲ್ಲಿ ಬ್ಲಾಕ್ ಟಿಕೆಟ್ ಮಾರಲು ಪ್ರತ್ಯೇಕವಾದ ಬ್ಲಾಕ್ ಟಿಕೆಟ್ ಕೌಂಟರ್ ನಡೆಸಿದರು. ಕಾಳಸಂಕೆಯನ್ನು ತಪ್ಪಿಸಲು ಸಾಧ್ಯವಿಲ್ಲವೆಂದಮೇಲೆ ಬ್ಲಾಕ್‌ಟಿಕೆಟ್ ಧೈರ್ಯವಾಗಿ ಮಾರಲು ಏನು ಅಡ್ಡಿ ಅದನ್ನು ಲಿಗಲೈಸ್ ಮಾಡಿ ಎನ್ನುವ ವಾದ ಮಂಡಿಸುವ ವಿಧಾನ. ಪೋಲೀಸರು ಹಾಗು ಚಿತ್ರಮಂದಿರದ ಮಾಲಿಕರು ಕೈಕಟ್ಟಿನಿಂತು ನೋಡುತ್ತಿದ್ದರಂತೆ.

ನಾನ್‌ಸೆನ್ಸ್ ಕ್ಲಬ್‌ನ ಚಟುವಟಿಕೆಗಳನ್ನು ನೋಡುವ ಜನ ಚಿಂತನೆ ಮಾಡುವ ಹಾಗೆ ಮಾಡುತ್ತದೆ. ಹಾಸ್ಯ ಮತ್ತು ವಿಡಂಬನೆಯಿಂದ ನಕ್ಕು ಸುಮ್ಮನೆ ಇರುವುದಾಗುವುದಿಲ್ಲ. ಅವರು ಮಾಡುವುದನ್ನು ಬೀದಿನಾಟಕವೋ, ಮುಷ್ಕರವೋ ಗಲಾಟೆಯೊ ಏನೆಂದೂ ವರ್ಗೀಕರಿಸಲಾಗದು. ಒಂದು ಸಾರಿ ಬೇಡಿಕೆಯಿಲ್ಲದ ಜಾತಾ ಕೂಡ ಗಂಭೀರವಾಗಿ ನಡೆಸಿಬಿಟ್ಟರು. ಭ್ರಷ್ಟಾಚಾರವೇ ಬೇಸ್ ಆಗಿರುವ ಹವಾಲ ಪಾರ್ಟಿ ಕಟ್ಟಿದರು. ಮೆಂಬರ್‌ಶಿಪ್‌ಗೆ ಆಹ್ವಾನ ಕೊಟ್ಟರು.

ಜೋಕ್‌ಗಳನ್ನು ಹೇಳಲು ಶುರುಮಾಡಿ (ಉಲ್ಟಾ-ಪುಲ್ಟಾ) ಫ್ಲಾಸ್ ಫ್ಲೋ, ಫುಲ್ ಟೆನ್‌ಷನ್ ಅತ್ಯಂತ ವಿಡಂಬನಕಾರಿ ಸೀರಿಯಲ್ ಕೊಟ್ಟರು. ಅವರು ಹೇಳುವ ಮಾತುಗಳು ಎಷ್ಟು ಪರಿಣಾಮಕಾರಿ ಎಂದರೆ ಅವರನ್ನು ಅನೇಕ ಜಾಹಿರಾತಿನ ಜಿಂಗಲ್‌ಗಳಲ್ಲಿ ಉಪಯೋಗಿಸಿಕೊಂಡರು. ಎಲ್ಲಾದರಲ್ಲೂ ಹಾಸ್ಯವೇ ಮಾಧ್ಯಮ. ನಗಿಸಲು ಮುಖ್ಯವಾಗಿ ಬೇಕಾಗಿರುವುದು ಸೀರಿಯಸ್ ಮುಖವೆಂದು ಪ್ರತಿಪಾದಿಸುವ ಮುಖ ಜಸ್ಪಾಲ್‌ಭಟ್ಟಿ, ಇನ್‌ಕಂ ಟ್ಯಾಕ್ಸ್ ರೈಡ್ ಮಾಡಿಸಿಕೊಳ್ಳುವ ಜನ, ಟೆಲಿಫೋನ್ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಲೈನ್‌ಮ್ಯಾನ್ನನ್‌ನ್ನು ಅಳಿಯನನ್ನಾಗಿ ಮಾಡಿಕೊಳ್ಳುವುದು, ಬಾಸ್‌ನ್ನು ಒಲಿಸಿಕೊಳ್ಳಲು ನೌಕರರು ಆಡುವ ಆಟಗಳು ಡಾಕ್ಟರೇಟ್ ಕೊಡಿಸುವ ಸಂಚು ಎಲ್ಲದಕ್ಕಿಂತ ಮಿಗಿಲಾಗಿ ಕ್ಲೈಮ್ಯಾಕ್ಸ್‌ನಲ್ಲಿ ಅರ್ಥಪೂರ್ಣ ಅಣಕವಾಡುಗಳು ಜಸ್ಪಾಲ್ ಭಟ್ಟಿಯನ್ನು ವಿಶ್ವವಿಖ್ಯಾತರನ್ನಾಗಿ ಮಾಡಿದೆ.

ಹಾಸ್ಯ ಕೇವಲ ನಗೋದಕ್ಕೆ ಅಥವಾ ಸಂತೋಷ ಪಡೋದಕ್ಕೆ ಉಪಯೋಗಿಸುವ ವಸ್ತುವಲ್ಲ. ಅವರ ಮೂಲಕ ಸಮಾಜ ಸುಧಾರಣೆ ಸಾಧ್ಯ, ಕಾರ್ಟೂನ್ ತರಹ ರಾಜ್ಯದ ಸೂತ್ರ ಹಿಡಿದ ಧುರೀಣರ ಗಮನವನ್ನು ಸೆಳೆಯುವ ಮೀಡಿಯಂ ಆಕ ಹುದೆಂದು ನಾನ್‌ಸೆನ್ಸ್ ಕ್ಲಬ್ ಮೂಲಕ ತೋರಿಸಿದ್ದಾರೆ.

ಈಗಿನ ಕಷ್ಟಕಾಲದ ಮಿಡಲ್ ಕ್ಲಾಸ್ ಮಂದಿಗೆ ಸುಲಭವಾಗಿ ಸಿಗುವ ವಸ್ತು ಅಂದ್ರೆ ನಮ್ಮ ಸುತ್ತಮುತ್ತ ಸಿಗುವ ಹಾಸ್ಯ ಸಾಮಗ್ರಿಗಳು ಮಾತ್ರ ಅಂತಾರೆ ಜಸ್ಪಾಲ್.

ನಾನ್‌ಸೆನ್ಸ್ ಕ್ಲಬ್‌ನ ಶಾಖೆಗಳು ಬೆಳೆಯಲಿ

★ ★ ★

ಕಾಶೀಲಿ ಬಿಟ್ಬಂದಿದ್ದು

– ಬಿ.ಎಸ್. ಪ್ರಭಾಕರ್

ಎರಡೇ ದಿನದಷ್ಟು ಹಿಂದೆ ಕಾಶಿಗೆ ಹೋಗಿ ಬಂದಿದ್ದ ನಾಣಿಯನ್ನು ಅಕಸ್ಮಾತ್ತಾಗಿ ಬಸ್‌ಸ್ಟ್ಯಾಂಡಲ್ಲಿ ಭೇಟಿಯಾದ ವೇಣು ''ಅರೇ, ನಾಣೀ? ಕಾಶಿಯಿಂದ ಯಾವಾಗ ಬಂದ್ಯೋ?'' ಅಂತ ಅಚ್ಚರಿಯಿಂದ ಪ್ರಶ್ನಿಸಿದ.

ನಾಣಿ ಮುಖದಲ್ಲಿ ಹೆಮ್ಮೆಯ ಕಿರುನಗೆ ಮಿಂಚಿತು. ''ಟೂ ಡೇಸ್ ಆಯ್ತು ಕಣೋ. ನಂ ಅತ್ತೆಗೋಸ್ಕರ ಕಾಶಿಯಿಂದ ಚೆಂಬ್ ತಂದಿದೀನಿ. ಅದನ್ನ ನಂ ಅತ್ತೆಗೆ ಅರವತ್ತವರ್ಷದ ಬರ್ತ್‌ಡೆ ಗಿಫ್ಟಾಗಿ, ಕೊಟ್ಬರೋಣ ಅಂತ ಹೊರ್ಟೆಕಣೋ. 111ನೇ ನಂಬರ್ ಬಸ್ಸು ಇಲ್ಲಿ ನಿಲ್ತದಲ್ಲ?'' ಅಂತ ಕೇಳಿದ.

''ಅರರೇ! ಇನ್ನೊಂದೆರ್ಡು ನಿಮ್ಷ ಬೇಗ್ಬರ್‍ಬಾರ್ದಾಗಿತ್ತಾ? ಈಗ್ತಾನೇ ಹೊರ್ಟ್ಹೋಯ್ತಲ್ಲೋ ನಾಣಿ. ಇನ್ನೊಂದ್ಗಂಟೆಗೇನೇ ಇನ್ನೊಂದು ಬಸ್ಸಿರೋದು. ಅದೂ ಡೌಟೇ, ಯಾಕಂತ್ಯೋ ಇಲ್ಲಿಂದ ಹೋಗೋವಾಗ್ಲೇ ಗುರ್‌ಗುರ್ ಅಂತ ಬೇಜಾರ್ಪಟ್ಕೊಂಡು, ಹೋಗ್ಲೋ ಬೇಡ್ವೋ ಅಂತ ನಿಂತೂ, ನಿಂತೂ ಹೋಯ್ತು. ಹೋಗ್ಲಿ ಬಿಡೋ ಯೋಚಿಸ್ಬೇಡ. ನಾನು 420 ನಂಬರ್ ಬಸ್ಗೆ ಕಾಯ್ತಾ ಇದೀನಿ. ಅದೂ ಇನ್ನೊಂದ್ಗಂಟೆಗೇನೆ ಅಂತೆ ಬರೋದು. ಅಲ್ಲಿ ತನ್ಕ ಕಂಪ್ನಿಕೊಡ್ತೀನಿ, ಕಾಫಿ ಕುಡ್ಕೊಂಡ್ಬರೋಣ ಬಾರೋ'' ಅಂತ ಸೂಚಿಸಿದ ವೇಣು.

''ಆಯ್ತು ನಡಿ ಬರ್ತೀನಿ'' ಅಂತ ಸಮ್ಮತಿಸಿದ ನಾಣಿ.

ಗೆಳೆಯರಿಬ್ಬರು ಹತ್ತಿರ್ದ ''ವರಾಹ ಫಾಸ್ಟ್‌ಫುಡ್ಸ್''ನಲ್ಲಿ ನಿಂತು, ಸಾವಧಾನವಾಗಿ ಕಾಫಿ ಹೀರುತ್ತಾ, ಹರಟೆಗೆ ಶುರು ಮಾಡಿದರು.

''ದೇವ್ರ ದರ್ಶನ ಚೆನ್ನಾಗಾಯ್ತೇನೋ? ಅಂತೂ ಬೆಂಗ್ಳೂರಲ್ಲಿ ಮಾಡ್ಬಾರ್ದನ್ನೆಲ್ಲಾ ಮಾಡಿ, ಪಾವನ ಗಂಗೇಲಿ ಅರ್ಪಿಸಿ, ಅದನ್ನ ಅಶುದ್ಧಿ ಮಾಡಿ ಬಂದೇ ಅನ್ನು. ಹೌದೂ, ಕಾಶೀಲಿ ನಿಂಗೆ ಇಷ್ಟ್ವಾದದ್ದು ಏನ್ ಬಿಟ್ಬಂದ್ದಿದ್ದಿಯೋ? ಕೋರಾನೋ? ಲಂಚ ತಿನ್ನೋದೋ? ಡ್ರಿಂಕ್ಸೋ? ಅಥ್ವಾ ಸ್ಮೋಕಿಂಗೋ?'' ಕೇಳಿದ ವೇಣು.

''ಅದ್ಯಾವ್ದೂ ಅಲ್ಲ, ಮೈಡಿಯರ್ ಫ್ರೆಂಡ್''

''ಹಾಗಾದ್ರೆ ಇನ್ನೇನ್ ಬಿಟ್ಬಂದ್ಯೋ?''

''ನಾ ಬಿಟ್ಬಂದಿರೋದು ಏನ್ ಗೊತ್ತಾ? ಇಲ್ಲೀ ತನ್ಕ ಯಾರ ಬುರ್ಡೇಗೂ

ಹೋಳೀದೇ ಇರೋ ಅಂತ ಸ್ಪೆಷಲ್ ಐಟಂಗಳನ್ನ ಬಿಟ್ಬಂದಿದೀನಿ ಗೊತ್ತಾ?''

''ವಾರ್ಲೆವಾ! ಯಾವ್ವೋ ನೀ ಬಿಟ್ಬಂದಿರೋ ಸ್ಪೆಷಲ್ ಐಟಂಸು?''

''ಯಾವ್ವು ಅಂತ ಕೇಳ್ತೀಯಾ? ಐದ್ಬಗೆ ಸ್ಪೆಷಲ್ ಸ್ವೀಟ್ಸ್, ಎಷ್ಟೇಳು, ಐದ್ಬಗೆ ಸ್ಪೆಷಲ್ ಸ್ವೀಟ್ಸ್‌ಗಳನ್ನ ಭಕ್ತಿಯಿಂದ ಬಿಟ್ಬಂದಿದೀನಿ, ತಿಳ್ಕೊ.''

''ಐದ್ಬಗೆ ಸ್ವೀಟ್ಸ್, ಬಿಟ್ಬಂದ್ಯೇನೋ ನಾಣಿ?''

''ಬರೀ ಐದ್ಬಗೆ ಸ್ವೀಟ್ ಅಲ್ಲ ಕಣೋ ವೇಣು, ಐದ್ಬಗೆ ಸ್ಪೆಷಲ್ ಸ್ವೀಟ್ಸ್. ಈ ಸ್ವೀಟ್ಸ್ ಜೆಸ್ಟ್ ಆರ್ಡಿನೆರಿ ಸ್ವೀಟ್ಸ್ ಅಲ್ಲ. ಸ್ಪೆಷಲ್ ಅನ್ನೋ ಪದಾನ ಒತ್ತೀ ಒತ್ತೀ ಹೇಳ್ತಾ ಇದೀನಿ, ಯಾಕ್ ಗೊತ್ತಾ? ಈ ಸ್ವೀಟ್ಸ್ ತಯಾರ್ಸೋಕೆ ಸ್ಪೆಷಲ್ ಪದಾರ್ಥಗಳೇ ಬೇಕಾಗ್ತವೆ. ಹಾಗೇ ತಯಾರ್ಸೋ ವಿಧಾನ ಕೂಡ ಸ್ಪೆಷಲ್ಲೇ ತಿಳ್ಕೊ. ಈ ವಿಷ್ಯಾನ ಕ್ಲಿಯರ್ರಾಗಿ ಚೀಟೀಲಿ ಬರ್ದು, ದೇವ್ರ ಮುಂದೆ ಭಕ್ತಿಯಿಂದ ಇಟ್ಟು, ''ಹೇ ಭಗವಾನ್, ಈ ಐಟಂಗಳನ್ನ ಇವತ್ತಿಂದ ನಿನ್ನ ಹೆಸ್ರಲ್ಲಿ ಬಿಟ್ಬಿಟ್ಟಿದೀನಿ'' ಅಂತ ಪ್ರಮಾಣ ಮಾಡಿ ಬಂದಿದೀನಿ, ನಿಂಗೆ ಏನನ್ಸುತ್ತೋ ನನ್ ಈ ತ್ಯಾಗಕ್ಕೆ?''

''ಅಯ್ಯೋ ಅನ್ಸುತ್ತೆ. ಅಲ್ವೋ ನಾಣಿ, ಸ್ವೀಟ್ಸ್ ಅಂದ್ರೇ ನಿದ್ರೇಲೂ ನೀರಾನೆ ತರ ಊರಗ್ಲ ಬಾಯ್‌ಬಾಯ್ ಬಿಡ್ತಿದ್ದೆ, ಹೇಳಿದ್ರೇ ಯಾರೋ ನಂಬ್ತಾರೆ ನಿನ್ನ. ಹೋಗ್ಲಯ್ಯ ಆ ಐದ್ಬಗೆ ಸ್ವೀಟ್ಸ್ ಯಾವ್ಯಾವ್ದು ಅಂತಾನಾದ್ರು ಹೇಳಯ್ಯ, ತಿಳ್ಕೊಳ್ಳೋಣ.''

''ಹೇಳೋಕೆ ನಂಗೇನ್ ಸಂಕೋಚ ಇಲ್ಲ. ಕೇಳು ಹೇಳ್ತೀನಿ. ಐಟಂ ನಂಬರ್ ಒನ್, ಸ್ಪೆಷಲ್ ರಸ್ಗುಲ್ಲ.''

''ಅಯ್ಯೋ ಅಯ್ಯೋ, ಪೆದ್ಮುಂಡೇದೆ, ರಸ್ಗುಲ್ಲ ಅಂದ್ರೆ ಮಾನ, ಮರ್ಯಾದೆ ಬಿಟ್ಟು ಹಂದಿ ತಿಂದ್ಹಾಗೆ ತಿಂತಿದ್ದೆ. ಅದೇನ್ಬಂತೋ ನಿಂಗೆ ಇದ್ದಕ್ಕಿದ್ದಾಗೆ ಅದನ್ನ ಬಿಡೋಕೆ?''

''ಅರೇ, ನಾ ಹೇಳಿದ್ದು ಸ್ಪೆಷಲ್ ರಸ್ಗುಲ್ಲ. ಇದು ಬಂಡೀಪುರ್ದ ಅಭಯಾರಣ್ಯದಲ್ಲಿ ಇರುತ್ವಲ್ಲ ಕಾಡೆಮ್ಮೆ, ಅವುಗ್ಳ ಹಾಲಿಂದ ಮಾಡಿರೋ ಸ್ಪೆಷಲ್ ರಸ್ಗುಲ್ಲ. ಇದನ್ನೇ ನಾನು ಭಯ ಭಕ್ತಿಯಿಂದ ಕಾಶೀಲಿ ಬಿಟ್ಬಂದಿರೋದು. ಸೋ, ಊರೆಮ್ಮೆ ಹಾಲಿಂದ ಮಾಡಿರೋ ಆರ್ಡಿನೆರಿ ರಸ್ಗುಲ್ಲಾನ ರಾಜಾರೋಷ್ವಾಗಿ ತಿನ್ನೋದ್ರಲ್ಲಿ ಯಾವ ತಪ್ಪೂ ಇಲ್ಲ. ಯಾವ ಪಾಪಾನೂ ಇಲ್ಲ. ದೇವ್ರು ನನ್ಮೇಲೆ ಯಾವ ಕ್ರಮಾನೂ ತೊಗೊಳ್ಳೋಕೆ ಆಗಲ್ಲ. ಯಾಕಂದ್ರೇ, ಲೀಗಲೀ ಅಂಡ್ ಟೆಕ್ನಿಕಲಿ ಐ ಯಾಮ್ ರೈಟ್ ಅಲ್ವಾ?''

''ಒಂದ್ವೇಳೆ ನೀ ಹೇಳ್ತಿರೋ ಸ್ಪೆಷಲ್ ರಸ್ಗುಲ್ಲಾನ ನಾ ತಂಕೊಟ್ರೇ ಏನ್ಮಾಡ್ತೀಯೋ?'' ಸವಾಲೆಸೆದ ವೇಣು.

''ನಿನ್ನ ಮಖ! ಕಾಡೆಮ್ಮೆ ಕೆಚ್ಚಲ್ಗೆ ಕೈಹಾಕೋ ಅಷ್ಟು ದಮ್ ಇದ್ಯಾ ನಿಂಗೆ? ಸಧ್ಯ ಕಾಡ್ನಲ್ಲಿರೋ ಜಿಂಕೆ ಬಾಲ ಹಿಡ್ಕೋ ನೋಡೋಣ ನಿನ್ ಧೈರ್ಯಾನ? ಹೋಗ್ಲಿಬಿಡು ನಂಗೇ ನಿಂಗೆ ಜಗ್ಳಯಾಕೆ. ಈಗ ಐಟಂ ನಂಬರ್ ಟೂ, ಏನು ಅಂತ ಹೇಳ್ತೀನಿ, ಅದೇ ಸ್ಪೆಷಲ್ ಜಾಮೂನ್. ನಾ ಬಿಟ್ಟಂದಿರೋ ಜಾಮುನು, ರಾಕ್ಷಸರ್ಗೂ ದವ್ಡೆ ನೋವು ಬರುತ್ತೆ ಅಂತಾ ಗಟ್ಟಿ ಜಾಮೂನು. ಅದೇಕಣೋ ವೇಣು, ಪುಳ್ಳಂಗಾಯಿ ಉಂಡೇ ಹಿಟ್ಟಿಂದ ಮಾಡಿರೋ ಜಾಮೂನ್. ಇದನ್ನೇ ಕಾಶೀಲಿ ಬಿಟ್ಟಂದೆ. ಸೋ ಗುಲಾಬ್ ಜಾಮೂನನ್ನ ಎಷ್ಟೇಕಾದ್ರೂ, ಗುಳ್ಕಾಯ ಸ್ವಾಹ ಮಾಡ್ಬ್ಹೌದು. ದೇವ್ರು ಕಮಕ್ ಕಿಮಕ್ ಅನ್ನೋ ಹಾಗೇ ಇಲ್ಲ. ಬಿಕಾಸ್, ಪಾಯಿಂಟ್ಸೇ ಇಲ್ಲ ಅವಂಗೆ ಹ್ಯಾಗಿದೆ ನನ್ನ ಐಡಿಯ?''

''ನಿನ್ನ ಐಡಿಯಾಗಿಷ್ಟು ಬೆಂಕಿ ಹಾಕ, ಅಲ್ವೋ ನಾಣಿ ದೇವ್ರ ಹೆಸ್ರಲ್ಲಿ ಹೀಗಾ ಮೋಸ ಮಾಡೋದು, ಒಳ್ಳೇದಾಗಲ್ಲ ನಿಂಗೆ ತಿಳ್ಕೊ'' ಎಚ್ಚರಿಸಿದ ವೇಣು.

''ಮೋಸ ಎಲ್ಬಂತೋ ವೇಣು, ಲೂಪ್ ಹೋಲ್ಸ್ ಹುಡ್ಕೋದ್ರಲ್ಲಿ ದೇವ್ರನ್ನ ಮೀರ್ಸೋಕಾಗುತ್ತಾ ಹೇಳು? ಫಾರ್ ಇನ್‌ಸ್ಟೆಂಸ್, ಬಲೀನ ಪಾತಾಳಕ್ಕೆ ಅದ್ಮಿದ್ದು, ವಾಲೀನ ಸಂಹಾರ ಮಾಡಿದ್ದು, ಹಿರಣ್ಯ ಕಶುಪುವನ್ನು ವಧಿಸಿದ್ದು, ಇವೆಲ್ಲಾ ನ್ಯಾಯಶಾಸ್ತ್ರದಲ್ಲಿರೋ ಲೂಪ್‌ಹೋಲ್ಸೇ ಅಲ್ವಾ? ನಾಮಾಡಿರೋದೂ ಅದನ್ನೇ. ಹೋಗ್ಲಿ ಬಿಡೋ, ಮಾಡ್ದೋರ ಪಾಪ ನಿನ್‌ಬಾಯ್‌ಲ್ಯಾಕೆ ಅಲ್ವಾ? ಈಗ ಐಟಂ ನಂಬರ್ ಥ್ರೀ; ಇದು ಸ್ಪೆಷಲ್ ಐಸ್‌ಕ್ರೀಮು. ಇದು ಬೂಸಾ, ತೌಡು, ಇಂಗು ಎಲ್ಲಾ ಬೆರ್ಸಿ, ಒಂಟೇ ಹಾಲಿಂದ ಮಾಡಿರೋದು. ಇದನ್ನೇ ನಾ ಅಲ್ಲಿ ಅರ್ಪಿಸಿ ಬಂದಿದ್ದು. ಸೋ, ಚಾಕೋಬಾರ್, ವೆನಿಲಾಬಾರ್, ಇತ್ಯಾದಿ ಇತ್ಯಾದಿ ತಿನ್ನೋದ್ರಲ್ಲಿ ತಪ್ಪಿಲ್ಲ ಅಲ್ವಾ? ಐಟಂ ನಂಬರ್ ಫೋರ್, ಸಬ್ಬಕ್ಕಿಯಿಂದ ಮಾಡಿರೋದೇ ಸ್ಪೆಷಲ್ ಲಾಡು, ಇದೂ ನಾ ಬಿಟ್ಟಿರೋದೇನೇ. ಸೋ ನಾರ್ಮಲ್ಲಾಗಿ ಮಾಡೋ ಲಾಡು ತಿನ್ನೋದ್ರಲ್ಲಿ ಭಯ ಇಲ್ಲ. ಫೈನಲ್ಲಾಗಿ ಫಿಫ್ತ್ ಐಟಂ, ಇದು ಹುಚ್ಚೆಳ್ಳು, ಕಾಕಂಬಿ ಬೆಲ್ಲ ಎಲ್ಲಾ ಚೆನ್ನಾಗಿ ನಾದು, ಕೊಬ್ರೀ ಎಣ್ಣೇಲಿ ಮಾಡಿರೋದೆ ಸ್ಪೆಷಲ್ ಮೈಸೂರ್ ಪಾಕ್. ಇದೂ ದೇವ್ರ ಹೆಸರ್ಗೆ ಬಿಟ್ಟಿರೋದು. ಇದನ್ನ ಯಾರ್ ಕೊಟ್ರೂ ರೆಫ್ಯೂಜ್ ಮಾಡ್ತೀನಿ. ಆದ್ರೇ ನಾರ್ಮಲ್ಲಾಗಿ ಮಾಡಿರೋ ಮೈಸೂರ್ ಪಾಕ್‌ನ ಎಷ್ಟೇಕಾದ್ರೂ ಲಗಾಯಿಸ್ತೀನಿ. ಹ್ಯಾಗಿದೆ ನನ್ನ ಪ್ಲಾನು'' ಹೆಮ್ಮೆಯ ಕಿರುನಗೆ ಮಿಂಚಿತು ನಾಣಿಯ ಮುಖದ ಮೇಲೆ.

ವೇಣು ಕಾಫಿಯ ಕೊನೆಯ ಗುಟುಕನ್ನು ಕುಡಿದು ಬರೀದಾದ ಲೋಟವನ್ನು ಕೆಳಗಿಡುತ್ತಾ ''ನಾಣಿ ನೀನು ಚಾಪೆ ಕೆಳ್ಗೆ ನುಗ್ಗುದ್ರೆ, ದೇವ್ರು ರಂಗೋಲಿ ಕೆಳ್ಗೇ ತೂರ್‍ತಾನೆ. ಟೈಮ್ ನೋಡ್ಕೊಂಡು ಕೈ ಕೊಡ್ತಾನೆ ನೋಡ್ತಾ ಇರು'' ಅಂತ ಭವಿಷ್ಯವಾಣಿ ನುಡಿದ.

ನಾಣಿ ಎದೆ ಉಬ್ಬಿಸಿಕೊಂಡು ''ಆ ಟೈಮ್ ಬರ್ಲಿ ಸಂಕ್ಟ ಬಂದಾಗ ವೆಂಕ್ಟರಮಣ ಅಂತ ಶರಣಾಗ್ಬಿಟ್ರೆ, ಅಜಮಿಳನ್ನ ಪಾರ್ಮಾಡ್ದ್ಹಾಗೆ ನನ್ನೂ ಪಾರ್ ಮಾಡೇ ಮಾಡ್ತಾನೆ, ಆ ಧೈರ್ಯ ನಂಗಿದೆ'' ಅಂತ ಉತ್ತರಿಸಿದ.

ವೇಣುವಿಗೆ ಚರ್ಚೆ ಮುಂದುವರೆಸಲು ಇಷ್ಟವಾಗಲಿಲ್ಲ. ಆದರೆ ಅದನ್ನು ತೋರಗೊಡದೆ, ''ಆಯ್ತು ಎದ್ದೇಳು, ನಿನ್ನ ಮೂರ್ನಾಮದ, ಡಕ್ಲೋ ಬಸ್ಸು ಬಂತೋ ಏನೋ, ಹೋಗೋಣ ಬಾ'' ಅಂತ ಹೇಳಿ ಎದ್ದು ನಿಂತ.

''ಹಾಗೇ, ನಿನ್ ಫ಼ೋರ್‌ಟ್ವೆಂಟಿ ಬ್ರೇಕ್‌ಲೆಸ್ ಸೂಪರ್ ಡೀಲಕ್ಸ್ ಬಸ್ಸೂ ಬಂತೋ ಏನೋ ನೋಡೋಣ ಬಾ'' ಅಂತ ನಾಣಿನೂ ಎದ್ದು ನಿಂತ.



ನಮ್ಮಪ್ಪ ಕೊಟ್ಟ ಡೊನೇಷನ್‌ಗೆ ತಕ್ಕ ಪಾಠ ಇಲ್ಲಿ
ಸಿಗ್ತಾ ಇಲ್ಲ ಅನ್ಸುತ್ತೆ ನನಗೆ



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕಡಾಂಬಿ.

Reg No.: BGW - 180

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.